
ಕೊರವಂಜಿ



Koravanji

ಸೆಪ್ಟೆಂಬರ್
೧೯೫೭

★

ಸಂಪಾದಕರು :
ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ಬಾಲು
ಶ್ರೀ|| ಕಾಮತ್
ಶ್ರೀ|| ರಾಮಿ
ಶ್ರೀ|| ದಾಶರಥಿ ದೀಕ್ಷಿತ್
ಶ್ರೀ|| ಕುಮಾರು
ಶ್ರೀಮತಿ ರುದ್ರಮ್ಮ
ಶ್ರೀ|| ಪುರುಷೋತ್ತಮ
ಶ್ರೀ|| ಅ. ರಾ. ಸೇ.

ಇತ್ಯಾದಿ, ಇತ್ಯಾದಿ.




ದಸರಾ ಬಿಡುಗಡೆ!
ಮಹಿರಾವಣ
ಕನ್ನಡ
R. ನಾಗೇಂದ್ರ ರಾವ್ · ಮೀನಾಕ್ಷಿ
ಸುಶೀಲ · ಬಾಲಕೃಷ್ಣ · ಗಣಪತಿ ಭಟ್
a TALLAM Release...
ಸೂಪರ್‌ವಿಶನ್
R. ನಾಗೇಂದ್ರ ರಾವ್
ನಿರ್ದೇಶನ.. G. ನಟರಾಜ್




For 3 way Beauty Treatment....
RAJA SNOW
RAJA AMLA
RAJA Kasturi Soap MANYAM & CO
RAJA
SNOW
AMLA HAIR OIL, KASTURI SOAP
MANYAM & CO. BANGALORE MADRAS MADURAI BOMBAY


ಯೋಜನೆಗಳಲ್ಲಿ ಪೆಯಿಂಟಿನ ಭಾಗ





ಭಾರತದ ತರತರದ, ವೈಶಿಷ್ಟ್ಯವುಳ್ಳ ಹೊಸ ಹೊಸ ಯೋಜನೆ ಮತ್ತು ಕೈಗಾರಿಕೆಗಳ ಅನೇಕಾನೇಕ ಕೋರಿಕೆಗಳನ್ನು ಪೂರೈಸಲು ಮತ್ತು ಅವುಗಳಿಗೆ ದೀರ್ಘಕಾಲ ಬಾಳ್ವಿಕೆ, ಚಿರಕಾಲ ರಕ್ಷಣೆಯನ್ನೀಯುವುದಕ್ಕೂ ಜತೆಯಲ್ಲಿ ಔದ್ಯೋಗಿಕ ಸೌಂದರ್ಯವನ್ನು ಕೊಡಲಿಕ್ಕೂ **ಷಾಲಿಮಾರ್ ಪೆಯಿಂಟುಗಳು** ವಿಶೇಷವಾಗಿ ತಯಾರಿಸಲ್ಪಟ್ಟವೆ.


ಇದಕ್ಕೆ ಕಾರಣವೇ, **ಷಾಲಿಮಾರ್ ಪೆಯಿಂಟುಗಳಿಗೆ** ಭಾರತದಲ್ಲಿ 55 ವರ್ಷಗಳಿಗಿಂತ ಮಿಗಿಲಾಗಿ ತಯಾರಿಕೆಯ ಅನುಭವದ ಬೆಂಬಲವಿದೆ.












ಯಾವದೇ ಪೆಯಿಂಟಿನ ಅವಶ್ಯಕತೆ ಇರಲಿ, ಯಾವ ಕೆಲಸಕ್ಕೆಂದು ಸ್ಪಷ್ಟವಾಗಿ ಹೇಳಿರಿ.

ಷಾಲಿಮಾರ್ ಪೆಯಿಂಟ್ ಪ್ರಾಡಕ್ಟ್ಸ್‌ಗಳು

ಎಲ್ಲಾ ತರದ ನಮ್ಮ ತಯಾರಿಕೆಗಳ ವಿವರಗಳನ್ನು ಕೊಡುವ ಷಾಲಿಮಾರ್ ರೆಡಿ ರೆಫರೆನ್ಸ್ ನೋಟಿಸುಬಗ್ಗೆ ಪೋ. ಬಾ. ೬೮, ಕಲ್ಕತ್ತ-1 ಕ್ಕೆ ಬರೆದುಕೊಳ್ಳಿರಿ.



SPW 360

ಅಕ್ಟೋಬರ್ ತಿಂಗಳಿನಲ್ಲಿ ಬರಲಿದೆ.



ಕೆಣಕೋಣು ಬಾರ

ಸಚಿತ್ರ ಅಣಕುವಾಡುಗಳ ಸಂಕಲನ

ವಧೂವರರಿಗೆ ಉಡುಗೊರೆ ಕೊಡಲು
ತಕ್ಕ ಹೊತ್ತಗೆ.

ಉಡುಗೊರೆ ಪ್ರತಿ ೫-೦-೦
ಸಾದಾ ಪ್ರತಿ ೨-೦-೦

ಕೊರವಂಜಿ ಕಾರ್ಯಾಲಯ,
ಬಳೇಪೇಟೆ, - - ಬೆಂಗಳೂರು-೯.

Koravanji, September 1957

ಕೊರವಂಜಿ

A. ANANTHIAH.

ಸಂಪುಟ ೧೨ ಸೆಪ್ಟೆಂಬರ್ ೧೯೫೨ ಸಂಚಿಕೆ ೬

ಕುಹಕಿಡಿಗಳು

ಸಿಲೋನ್ ರೇಡಿಯೋದ ಅಧಿಕಾರಿ ವರ್ಗದವರು, ಝುಂ ಝುಣಿಸುತ್ತಾ, ಡಾ|| ಕೇಸ್ಕರ್‌ರವರ ಭಾಷಣವನ್ನು ಕೇಳಿದರಂತೆ.

—ಕಿವಿಯಲ್ಲಿ ಕೇಳಿಸಿದ್ದು, ನಾಲಿಗೆಗೆ ಬರಕೂಡದೆಂದೇ ಹಿರಿಯರ ಹಿತನುಡಿ!!

* * *

ನಮ್ಮ ದೇಶದ ಉದ್ಧಾರಕ್ಕೆ ಈಗ ಬಲಪಕ್ಷವು, ಹಣವಂತರ ಪಕ್ಷವು ಒಟ್ಟುಗೂಡಿ, ಬಲಯುತವಾದ ವಿರೋಧ ಪಕ್ಷವನ್ನು ರಚಿಸಬೇಕು (ರಾಜಾಜಿ).

—ಏಕೆ? ಎಡಪಕ್ಷದ ಆಳುವ ಪಕ್ಷದಲ್ಲಿರುವವರಲ್ಲಿ, ಸುಮಾರು ಮಂದಿ ಬಲಗೈಯನ್ನೇ ಹಿಂದಕ್ಕೆ ಚಾಚಿ, ಬಲಪಕ್ಷವನ್ನು ಬಲಯುತಗೊಳಿಸುತ್ತಿಲ್ಲವೇ?

* * *

ಅಖಿಲ ಕರ್ಣಾಟಕ ಮಕ್ಕಳ ಸ್ಪರ್ಧೆಯಲ್ಲಿ, ಅಧ್ಯಕ್ಷರ ಮಕ್ಕಳಿಗೇ ಮೊದಲ ಬಹುಮಾನ ದೊರೆತುದು, ಸಂಚಾಲಕರ ಜಾಣತನಕ್ಕೆ, ಸಾಕ್ಷಿ!!

* * *

ಏನಂತೀರೀ, ಪಾತೂಬಾಯಿ! ಗೌರಿ ಗಣೇಶ ಒಂದೇದಿನ ಬಂದುಬಿಟ್ಟಕಿ ಒಂದು ರಜಾ ದಿನ ಅನ್ಯಾಯವಾಯಿತಲ್ರೀ! ಎಂದು ಮೇಡಂ ಗೌರಮ್ಮನವರು, ಅಂದರಂತೆ.

—ಪಾಪ! ಅವರ ಗಣೇಶ, ಸಿನಿಮಾ ಆಪರೇಟರ್.

* * *

ಕಾಶ್ಮೀರದಲ್ಲಿ ಅಧಿಕಾರದಲ್ಲಿರುವ ಪಕ್ಷದ ಹಲವಾರು ಸದಸ್ಯರು ಮೂಲ ಧ್ಯೇಯ ಒಂದೇ ಆದರೂ ಸಣ್ಣಪುಟ್ಟ ವಿರಸಕ್ಕಾಗಿ ರಾಜೀನಾಮೆಯಿತ್ತಿದಾರಂತೆ.

—ಗಂಡ ಹೆಂಡಿರ ಜಗಳ—ಅಷ್ಟೇ!!

* * *

ಕೇರಳದ ಹೆಣ್ಣನ್ನು ಮದುವೆಯಾದ ಕಾಸರಗೋಡಿನವನು "ನನಗೆ ಚಹಾ ಬೇಡ, ಬೆಳಿಗ್ಗೆ ಕಾಫಿಯೇ ಬೇಕು" ಎಂದು ಹಠ ಹಿಡಿದಾಗ ಚೋರು ತಣ್ಣಿಯೇ ಸಿಕ್ಕಿತಂತೆ—

—ಪಾಪ!

* * *

ಮಂಗಳಾ ಅಣೆಕಟ್ಟಿಗೆ ಭಾರತೀಯರು ಪ್ರತಿಭಟಿಸಿದ್ದಾರಂತೆ.

— ಯಾರಿಗೆ ಮಂಗಳವೋ! .... ಶಿವನೇ ಬಲ್ಲ!!

* * *

ಅಪ್ಪಾ, ಅಮ್ಮಾ ಎಂದು ತೊದಲುತ್ತಾ ಕನ್ನಡ ಮಾತು ಆಡಿದವರು ಮೈ ಡಿಯರ್, ಡಾರ್ಲಿಂಗ್, ಮೇರಿ ಪ್ಯಾರೇ ಎಂದಾಗ, ಹೆತ್ತವರು, ದೇವರ ನೆರಳಂಚನ್ನು ಕಂಡರಂತೆ.

* * *

ಗೋಕುಲಾಷ್ಟಮಿ ಪುಳ್ಳಂಗಾಯಿ ಉಂಡೆಯನ್ನು ಕಾಸ್ಬಂಗಲೆಯ ಕೋತಿ ಯೊಂದಕ್ಕೆ ಕೊಟ್ಟಾಗ, ಅದು ಒಮ್ಮೆ ಕಚ್ಚಿನೋಡಿ, ನಂತರ ವಿಶ್ವಾಸದಿಂದ ಕಾವಲು ಗಾರನಿಗೆ ಕೊಟ್ಟಿತಂತೆ.

* * *

ಹಿರಿಯ ನಾಯಕರ ಮಗಳೊಬ್ಬಳು ಭಾರೀ ಅಣೆಕಟ್ಟಿನ ಉದ್ಘಾಟನಾ ಮಹೋತ್ಸವದಲ್ಲಿ ಒಂಟಿ ಸೀನು ಸೀನಿದಳಂತೆ.

—ಫಲಿತಾಂಶ :—ಅಣೆಕಟ್ಟು, ಅಧಿಕಾರಿಗಳು ಸೌಭಾಗ್ಯದಿಂದಿದ್ದರೂ, ನೂರು ಜನ ನಾಲ್ಕನೆಯ ದರ್ಜೆಯವರು ಕೆಲಸ ಕಳೆದುಕೊಂಡರಂತೆ — ಅವರುಗಳು ಅಜಾಗರೂಕತೆಯಿಂದ ರಸ್ತೆಗೆ ಮಣ್ಣು ಹೂಡಿದ ಕಾರಣ, ರಸ್ತೆಯಲ್ಲಿ ಬರುವ ಮೋಟಾರುಗಳು ಕೆಸರಿನಲ್ಲಿ ಹೂತ ಕಾರಣದಿಂದಾಗಿ.

ಉರಿಗಾಳು

ಸರ್ಕಾರಿ ಕೆಲಸ ದೇವರ ಕೆಲಸ, ಎಂಬುದನ್ನ ಕೆರೆದು ತೆಗೆದು, ಸತ್ಯಮೇವ ಜಯತೆ ಎಂದು ಬರೆಯುತ್ತಾರಂತೆ, ವಿಧಾನ ಸೌಧದ ಹಣೆಯಲ್ಲಿ....ಮೇವಂತೂ ಇದ್ದೇ ಇರುತ್ತದಲ್ಲಾ....

* * *

ಶಾಸ್ತ್ರೀಯ ಸಂಗೀತವೆಂದರೇನು, ಎಂಬ ಪ್ರಶ್ನೆಗೆ ಒಬ್ಬರು ವಿದ್ವಾಂಸರು, "ಹಾಡುವುದಕ್ಕೂ ಕಷ್ಟ, ಕೇಳುವುದಕ್ಕೂ ಕಷ್ಟ" ಅಂದರಂತೆ....ಹಾಗಾದರೆ, ಅದನ್ನ ಶಸ್ತ್ರೀಯ ಸಂಗೀತ ಅಂತ ಏಕೆ ಹೇಳಬಾರದು ?

* * *

ಸ್ಕೌಟುಗಳೇಕೆ ಎಡಗೈ ಕೊಟ್ಟು ಕುಲುಕುತ್ತಾರೆ, ಎಂದರೆ, ಒಬ್ಬ ಸ್ಕೌಟ್ ಹೇಳಿದನಂತೆ, ಬಲಗೈ ಯಾವಾಗಲಾದರೂ ಕತ್ತರಿಸಿ ಬಿದ್ದರೆ ಅದಕ್ಕೂ ಸಿದ್ಧರಾಗಿರ ಬೇಡವೆ, ನಾವು ? ಅದಕ್ಕಾಗಿ, ಈಗಲೇ ತಯಾರಿ.

* * *

ಬೆಂಗಳೂರಿಗೆ ಮೊನ್ನೆ ಬಂದ ಒಬ್ಬರು ಶ್ರೀಮಂತ ಮಹನೀಯರು ರೈಲು ಸ್ಟೇಷನ್ನಿನಲ್ಲಿ ಅವರನ್ನು ಹಿಡಿದು ನಿಲ್ಲಿಸಿ ಟ್ರಂಕ್ ತೆರೆಯುವಂತೆ ಬಲವಂತಪಡಿಸಿದ ಸುಂಕದವರ ಮಾತು ಕೇಳದೆ, ಟ್ರಂಕನ್ನೇ ಅವರೆದುರು ಬಿಸಾಕಿ ಹೊರಟುಹೋದರಂತೆ ....ಪಾಪ ! ಟ್ರಂಕು ತುಂಬ ಹರಕು ಬಟ್ಟೆಗಳಿದ್ದುವು ಎಂದು ತೋರುತ್ತೆ.

* * *

ಔಷಧಿ ತೆಗೆದುಕೊಳ್ಳದೆ ಇದ್ದರೆ, ಡಾಕ್ಟರುಗಳು ಪಾಪ ಹೇಗೆ ಬದುಕಿಯಾರು? ಆದ್ದರಿಂದ, ಅವರ ಅಂಗಡಿಗಳಿಗೆ ಹೋಗಿ ದುಡ್ಡು ಕೊಟ್ಟು ಔಷಧಿ ತರಬೇಕು........ ತಂದು, ಚೆಲ್ಲಿಬಿಡಬೇಕು....ಏಕೆಂದರೆ, ನಾವು ಬದುಕಬೇಡವೆ ?

* * *

ನಡೆದದ್ದನ್ನೆಲ್ಲ ನಡೆದಂತೆ ಹೇಳಿಬಿಡುತ್ತೇನೆ — ನನಗೆ ಲಾಯರೂ ಬೇಡಿ, ಗೀಯರೂ ಬೇಡಿ, ಎಂದು ಒಬ್ಬ ಮೊನ್ನೆ ಜಡ್ಜಿ ಎದುರು ನಿಂತು ಹೇಳಿದಾಗ, ಅವರೊಬ್ಬರೇ ನಕ್ಕರಂತೆ.

* * *

ತ್ಯಾಗಿಯ ಮನಕ್ಕೆ ಹೊನ್ನ ತೋರಿದೆ; ಯೋಗಿಯ ಮನಕ್ಕೆ ಹುದ್ದೆಯ ತೋರಿದೆ; ಬಂದಿಯ ಮನಕ್ಕೆ ಮಣ್ಣ ತೋರಿದೆ; ಎಲ್ಲರ ಮನಕ್ಕೂ ನಿನ್ನ ವಚನ ತೋರಿದೆ. ಇಂತೀಪರಿ ಆನೆಯ ಕೆರಳಿಸಿ ಮೀಸೆಯ ತಿರುವಿದರೆ, ಮೋಸದಲಿ ಕೂಸ ನೆತ್ತಿಕೊಂಡುಹೋದರೆ, ಕೇಳಿದಳು ಕೊರವಂಜಿ ಕಾಯುವ ಪರಂಜಿದೇವಿ.

* * *

ಕೆಲವೇ ತಿಂಗಳಲ್ಲಿ ನೃತ್ಯ ಕಲೆಯನ್ನು ಹಸ್ತಗತಮಾಡಿಕೊಳ್ಳಬಹುದೆಂದು ಅನೇಕ ಜನ ತಿಳಿದಿರುವುದು, ಎಂಥ ವಿಷಾದಕರ ಪರಿಸ್ಥಿತಿ?—ಎಂದು ಶ್ರೀಮತಿ ರುಕ್ಮಿಣಿದೇವಿ ಅರುಂಡೇಲ್ ಅವರು ಕೇಳಿದ್ದಾರೆ....ಹೆಜ್ಜೆ ಎಲ್ಲ ತಪ್ಪು ತಪ್ಪು, 'ಹಸ್ತಗತ'ವಾಯಿತು, ಎಂದರೇನು ಬಂತು? ಇಂಥವರು ಒಂದೇ ತಿಂಗಳಲ್ಲಿ ಕಲಿಸಿ ಶಿಷ್ಯರ ಅರಂಗೇತ್ರವನ್ನೂ ನಡೆಸಿಬಿಡುತ್ತಾರೆ.

* * *

ಸುಪ್ರಸಿದ್ಧ ವೀಣೆ ವಿದ್ವಾಂಸರೊಬ್ಬರ ಹೆಸರು ಹೇಳಿ, ಅವರ ವೀಣೆ ಕೇಳಿದ್ದೀರಾ, ಅಂತ ನಮ್ಮವರೊಬ್ಬರನ್ನು ಪ್ರಶ್ನಿಸಿದರೆ, ಅವರು ಉತ್ತರಿಸಿದರು, "ನಾನು ಏಕೆ ಕೇಳಲಿ! ತೆಗೆದುಕೊ, ಅಂತ ಕೊಟ್ಟುಬಿಟ್ಟರೆ, ಅದನ್ನ ಹಿಡಿದುಕೊಂಡು ನಾನೇನು ಮಾಡಲಿ?" ಅಂದರು.

* * *

ನೋಡಿ ಸ್ವಾಮಿ, ನನ್ನ ಕವನವೊಂದನ್ನೂ ಪ್ರಕಟಿಸುತ್ತಾ ಇಲ್ಲ, ಈ ಪತ್ರಿಕೆಯವರು. ಪ್ರತಿಭಾವಂತ ಯುವಕನೊಬ್ಬನನ್ನು ಸಾಯಿಸಿಬಿಡಬೇಕೆಂಬ ಪಿತೂರಿ, ಇದು! ಏನು ಮಾಡಲಿ ನಾನು, ಹೇಳಿ, ಎಂದು ನಮಗೊಬ್ಬರು ಬರೆದಿದ್ದಾರೆ........ ಆ ಪಿತೂರಿಗೆ ನೀವು ಸೇರಿ, ಎಂದು ಉತ್ತರ ಬರೆದಿದ್ದೇವೆ. ನಾಳೆ ನಾಳಿದ್ದು ಸುದ್ದಿ ಬರಬಹುದು.

* * *

ಸುಪ್ರಸಿದ್ಧ ಸಿನಿಮಾ ನಟನೊಬ್ಬ ಒಂದು ಚಿತ್ರದಲ್ಲಿ ಸತ್ತಂತೆ ನಟಿಸುತ್ತಾನೆ. "ಆ ಭಾಗವನ್ನು ನೋಡಿ, ಪ್ರೇಕ್ಷಕರು ಕಣ್ಣೀರು ಸುರಿಸುತ್ತಿರುವರು, ನೋಡಿದಿರಾ" ಎಂದು ಆತ ಹೆಮ್ಮೆಪಟ್ಟರೆ, ಆತನ ಗೆಳೆಯ ಹೇಳಿದನಂತೆ, "ಲೋ! ನಿನ್ನ ನಟನ ಸಾಮರ್ಥ್ಯದಿಂದ ಹಾಗಾಗಿಲ್ಲ; ಇದು ಬರೀ ನಟನೆಯಾಯಿತಲ್ಲಾ, ಆಸಾಮಿ ನಿಜವಾಗಿಯೂ ಸತ್ತಿಲ್ಲವಲ್ಲಾ, ಎಂದೇ ಜನ ಅಳುತ್ತಿದ್ದಾರೆ, ಕಣೊ" ಅಂದನಂತೆ.

* * *

ಪಾಕಿಸ್ತಾನದಿಂದ ಆಕ್ರಮಣ ಭೀತಿ ಹೆಚ್ಚಾಗುತ್ತಿರುವುದಕ್ಕೂ, ಗಡಿಯ ಪ್ರಾಂತ್ಯಗಳಾದ ಪಂಜಾಬ್ ಕಾಶ್ಮೀರಗಳಲ್ಲಿ ಗೊಂದಲಗಳೆದ್ದಿರುವುದಕ್ಕೂ ಯಾವ ಸಂಬಂಧವೂ ಇಲ್ಲವಂತೆ........ಇಂತಹ ಗೊಂದಲಗಳೂ ಒಡಕುಗಳೂ ನಮ್ಮಲ್ಲಿ ಮಾಮೂಲಾಗಿ ನಡೆಯುವುವು.

ಸ್ವಾತಂತ್ರ್ಯದ ಶತಮಾನೋತ್ಸವದ

ಕೊರವಾವಲೋಕನ

ಸ್ವಾತಂತ್ರ್ಯೋತ್ಸವವನ್ನು ನಮ್ಮ ಕ್ಲಬ್ಬಿನಲ್ಲಿ ಭರ್ಜರಿಯಾಗಿ ನಡೆಸಿದರು :— ಆಗಸ್ಟ್ ೧೫ನೇ ತೇದಿ; ಸಂಜೆಯಿಂದ ಮುಂಜಾವಿನವರೆಗೆ. ಆ ಸಂಜೆ........

ಏಳಕ್ಕೆ ಕೂಟ : ಎಂಟಕ್ಕೆ ನೋಟ : ಒಂಭತ್ತಕ್ಕೆ ಊಟ.
ಹತ್ತು ಹೊಡೆದಾಗ ಭಾಷಣದ ಕಾಟ : ಹನ್ನೊಂದಕ್ಕೆ ಬರೀ ಗಲಾಟೆ.

* * *

ಎಂಟು ಗಂಟೆಯ ವೇಳೆಗೆ ಟೆರ್ಬಾನ್ ಸ್ಯಾರಿಯುಟ್ಟು ಲಕ್ಷ್ಮೀಲೋಚನೆ ತನ್ನ ಗಂಡನೊಂದಿಗೆ ನಮ್ಮ ಮೇಜಿನ ಬಳಿಗೆ ಬಂದು ಕುಳಿತಳು.

ಮಿಂಚು ಬಂದು ಕುರ್ಚಿಯಲ್ಲಿ ಕುಳಿತಾಗ ಹಿಂದೆಯೇ ಗುಡುಗು ಕೇಳಿಸುವು ದಿಲ್ಲವೇ ? ಕೇಳಿಸಿತು. ನಿಂತವರೆಲ್ಲರ ಗಂಟಲಿನಿಂದ.

ಗಂಡ, ಝಾನ್ಸಿರಾಣಿಯು ಕೆಚ್ಚಿನ ಹೋರಾಟದ ಕಥೆಯನ್ನು ಹೇಳಿದ. ನವಿರೆದ್ದು ನಿಂತಿದ್ದನಾವೆಲ್ಲಾ ಕುಂತೆವು, ಸುಸ್ತಾಗಿ.

ಆದರೆ ಕೊರವ ಕೂರಲಿಲ್ಲ. ನಿಂತೇ ಇದ್ದ.

ಬಲಗೈಯ್ಯಲ್ಲಿ ಹೊಳೆವಾ ಗಲಾಸು
ಎಡಗೈಯ್ಯಲ್ಲಿ ಹುದುಗಿಹ ಮುಂಡಾಸು
ಹಿಂದೆ ಬೇರರ ಸರಸರ
ಮುಂದೆ ನಾವೆಲ್ಲಾ ಕರಪರ
ಇವನಂಥಾ ಧೀರಾನು ಇಹನೇ—ಮೂಲೋಕ ಕ್ಲಬ್ಬಿನ ಒಳಗೇ—

ಝಾನ್ಸಿ ರಾಣಿ ಏಕೆ ? ಶ್ರೀಮತಿ ಲಕ್ಷ್ಮೀಲೋಚನೆ ಈ ದಿನ ನಮ್ಮನ್ನು ನಡೆಸುವುದಾದರೆ, ನಮ್ಮ ಭಾರತದ ಆರ್ಥಿಕ ಸ್ವಾತಂತ್ರ್ಯವನ್ನು ನಾವು ಗೆದ್ದೇ ಬಿಡುತ್ತೇವೆ. ರಾಜಕೀಯ ಸ್ವಾತಂತ್ರ್ಯವನ್ನು ನಮ್ಮ ಬಾಪೂಜೀ ಇತ್ಯಾದಿಗಳು ಗೆದ್ದುಕೊಟ್ಟರು. ಈಗ ಆರ್ಥಿಕ ಸ್ವಾತಂತ್ರ್ಯ—ಜೈ! ಲಕ್ಷ್ಮೀಲೋಚನೆ!!

ಎಂದು ನಾವೆಲ್ಲಾ ಜಯಘೋಷವನ್ನು ಮೊಳಗಿದೆವು.

ಅರವಾನೊದ್ದು ಕೂಡ, ಯಾರಿಗೂ ತಿಳಿಯದಂತೆ ಜಿನ್ ಬೆರೆಸಿದ್ದ ಟೊಮಾಟೋ ರಸವನ್ನು, ಪೂರ್ಣ ಪ್ರಜ್ಞನಂತೆ, ಕುಡಿದು ಜೈ! ಎಂದು ಕೂತು ಕೊಂಡೇ ಜಯಘೋಷವನ್ನು ಮಾಡಿದ.

* * *

ಸರ್ರನೆ ಒಂದು ಥಡೂತಿ ಜೀರುದುಂಬಿ ನಮ್ಮ ಮೇಜಿನ ಮೇಲೆಲ್ಲಾ ಹಾರಾಡ ತೊಡಗಿತು. ಮೊದಲು ಚೀರುತ್ತಾ ಓಡಿಹೋದವಳು ಲಕ್ಷ್ಮೀ ಲೋಚನೆ. ಮಿಕ್ಕವರೆಲ್ಲಾ ಚೆಲ್ಲಾಪಿಲ್ಲಿ ಬೆದರಿ ಬೆವರಿ ಟಾಂಗ್ ಬಿರಾಂಗ್ ಹೊಡೆದುಕೊಂಡು ಓಡಿ ಹೋದವರು—

ಮೇಜಿನ ಸುತ್ತ ಉಳಿದವರು ಅರವಾನೊದ್ದು, ನಾನೂ, ಕುಂತವರು. ಕೊರವ ನಿಂತವನು.

ಆಗ, ಆ ಜೀರುದಂಬೆ ಮೇಜಿನ ಮೇಲೆ ಬಂದಿಳಿದು ಕೂತಿತು. ಅದು ಆಟದ ಜೀರುದುಂಬೆ ಅಂತ ಆಗ ತಿಳಿಯಿತು.

ಕೊರವ ಆಗಂದ—ಈ ಜೀರುದುಂಬೆಗೆ ಕೀಲಿ ಕೊಟ್ಟು ನಾನೇ ಹಾರಿಸಿದೆ, ಒಂದೇ ನಿಮಿಷ ಹಾರಿದ್ದು. ಈಗ ತೆಪ್ಪಗೆ ನಿಟ್ಟುಸಿರಿಟ್ಟು ಇಲ್ಲಿ ಥಂಡಾ ಆಯಿತು. ಇದರ ಹಾರಾಟಕ್ಕೇ ಹೆದರಿ ಚಲ್ಲಾಪಿಲ್ಲಿಯಾದವರು, ಆರ್ಥಿಕ ಸಮರಕ್ಕೆ ಯಾರ ನಾಯಕತ್ವದಲ್ಲಿ ತಾನೇ ಸಿದ್ಧರಾಗಿರುವರು—ನೀವಿಬ್ಬರೂ ಇಲ್ಲೇ ಇರುವುದಕ್ಕೆ ಕಾರಣ—ನಿಮ್ಮ ಕಾಲುಗಳು ನಿಮ್ಮ ಬುದ್ಧಿಯ ಹತೋಟಿಯಲ್ಲಿಲ್ಲ ಅಷ್ಟೇ! ಎಂದು ಹೇಳಿ, ಮೇಜಿನ ಮೇಲೆ, ಖಾಲಿಯಾಗಿದ್ದ ತನ್ನ ಗಲಾಸನ್ನು ರಷ್ಯನರ ರೀತಿ ಒಡೆದು, ಮಾಯವಾದ.

—ನಾವಿಬ್ಬರೂ ಹನ್ನೊಂದರಿಂದಾಚೆ ಎಚ್ಚೆತ್ತು ಸ್ವಾತಂತ್ರ್ಯೋತ್ಸವವನ್ನು ಅನೂಚಾನವಾಗಿ ಆಚರಿಸಿದೆವು.

ಜೈ!.... ಜೈ!!.... ಯಾವುದಕ್ಕೆ? ಮರೆತುಹೋಗಿತ್ತು?

* * *

ಸುಮಾರು ಹನ್ನೊಂದೂವರೆ ರಾತ್ರಿ ಆಗಿದ್ದಿರಬಹುದು. ನಮ್ಮ ಕ್ಲಬ್ಬು ಧಿಗಧಿಗ ಅಂತ ಬೆಂಕಿಬಿದ್ದ ಮನೆಯಂತೆ ರಾರಾಜಿಸುತ್ತಿತ್ತು.

—ಬೇರರ್! ಎಂದು ನಾನು ಸ್ವತಂತ್ರ ಕರ್ಕಶ ದನಿಯಲ್ಲಿ ಕೂಗಿದೆ.

ಸಾರ್! ಎಂದು ಮಾರ್ದನಿಯಿತ್ತ ಬೇರರೊಬ್ಬನು ಹತ್ತು ನಿಮಿಷದ ತರುವಾಯ ಕಣ್ಣು ಹೊಸಕುತ್ತಾ ಬಂದು ನಿಂತ.

"ಬೆಳಿಗ್ಗೆ ೫ ಗಂಟೆಗೆ ಎದ್ದು ಹೆಂಡಿರು ಮಕ್ಕಳಿಗೆ ಕಾಫಿ ಕಾಸಿಟ್ಟು ಓಕ್ಕೆ ಕ್ಲಬ್ಬಿಗೆ ಬಂದೆ. ಏಳರ ತನಕ ಅಡಿಗೆ ಮನೆಯನ್ನು ವಾರಣಮಾಡಿದೆ. ಏಳೂ ವರೆಗೆ ಗಾಲ್ಫ್ ಆಡಿ ಸುಸ್ತಾದವರು ಬಂದರು. ಅವರ ದಾಹ ಹಸಿವುಗಳನ್ನು ಅಡಗಿಸಿದೆ. ಒಂಭತ್ತಕ್ಕೆ ಚೀಟಿಯಾಟಕ್ಕೆಂದು ರಜಾ ದಿನ ಬಂದವರ ಸೌಕರ್ಯ ನೋಡಿಕೊಂಡೆ. ಹನ್ನೊಂದಕ್ಕೆ ನನಗೆ ವಿರಾಮಕಾಲ ಮನೆಗೆ ಹೋಗುವಾಗ, ಸ್ಟೇಡಿಯಂನಲ್ಲಿ ಸಾಮೂಹಿಕ ಮಕ್ಕಳ ಪ್ರದರ್ಶನ ನಡೆಯುತ್ತಿತ್ತು. ಅದು ಬಲು ಚೆನ್ನಾಗಿತ್ತು. ಹತ್ತಿರ ಹೋಗಿ ನೋಡಲು ನಿಂತೆ. ಎಂಟು ವರ್ಷದ ಮಗು, ಪ್ರದರ್ಶನದಲ್ಲಿ ೨ ತಾಸು ಭಾಗವಹಿಸಿದ್ದ ಮಗು ತುಟಿಯನ್ನೇ ತನ್ನ ನಾಲಿಗೆಯಿಂದ ನೆಕ್ಕುತ್ತಿತ್ತು. ಬಾಯಿ ಆರಿದೆಯೇ ಎಂದೆ. ಹ್ಞೂ ಎಂದು ತಲೆಯಾಡಿಸಿತು. ಕ್ಲಬ್ಬಿಗೆ ತಿರುಗಿ ಬಂದೆ. ಎರಡು ಕೊಡ ನೀರು ಹೊತ್ತುಕೊಂಡು ಹೋದೆ. ಅಲ್ಲಿದ್ದ ಬೇಡಿದ ಮಕ್ಕಳಿಗೆಲ್ಲಾ ನೀರು ಸರಬರಾಜು ಮಾಡಿದೆ. ಪ್ರದರ್ಶನ ಮುಗಿದಾಗ ಮಧ್ಯಾಹ್ನ ನಾಲ್ಕು ತಾಸು ಆಗಿತ್ತು. ಕ್ಲಬ್ಬಿಗೆ ಡ್ಯೂಟಿಗೆ ಬರುವ ವೇಳೆಯಾಗಿತ್ತು. ಹಿಂತಿರುಗಿ ಕ್ಲಬ್ಬಿಗೆ ಬಂದು ಡ್ಯೂಟಿಗೆ ಹಾಜರಾದೆ. ಹೊಟ್ಟೆಯಲ್ಲಿ ಏನೋ ಚುರ ಚುರ ಅಂತ ಆಗುತ್ತಿತ್ತು. ಆದರೆ ನೀರು ಕುಡಿದ ಆ ಮಕ್ಕಳ ಮೊಗದ ಸಂತಸವನ್ನು ನೆನೆದುಕೊಂಡು ಹೊಟ್ಟೆ ಕೂಡಲೆ ತಂಪಾಗುತ್ತಿತ್ತು. ಕ್ಲಬ್ಬಿನ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತಿಲ್ಲ. ಆದರೆ ಈಗ, ಹನ್ನೊಂದಾದ ಮೇಲೆ, ಏಕೋ ಏನೋ ಕಣ್ಣು ಸೆಳೆಯುತ್ತಿದೆ. ಹೇಳಿದಂತೆ ಕಾಲು ಕೇಳುವುದಿಲ್ಲ.

ಏನು ಬೇಕು ಸಾರ್!

ಎಂದು ತಮಿಳಿನಲ್ಲಿ ಅರ್ಥವತ್ತಾಗಿ ಹೇಳಿದ್ದನ್ನು ಕೇಳಿದ ನಾನು ಕನ್ನಡದಲ್ಲಿ ಬರೆದಿದ್ದೇನೆ.

ಮೂವರೂ ಒಬ್ಬರ ಮುಖ ಒಬ್ಬರು ನೋಡಿದೆವು. ನಾಚಿಕೆಯ ಕಳೆ ನಮ್ಮೆಲ್ಲರ ಮುಖದ ಮೇಲಿತ್ತು.

ಖಾಲಿಯಿದ್ದ ನಾಲ್ಕನೇ ಕುರ್ಚಿಯ ಮೇಲೆ ಅವನನ್ನು ಕೂರಿಸಿದೆವು. ನಾವೇ ಅಡುಗೆ ಮನೆಗೆ ಹೋಗಿ ಇದ್ದ ತಿಂಡಿಯನ್ನು ತಂದು ಅವನಿಗೆ ಉಣಿಸಿದೆವು.

ಹನ್ನೆರಡಾದಾಗ, ಅವನನ್ನು ಕೊರವ ತನ್ನ ಕಾರಿನಲ್ಲಿ ಅವನ ಮನೆಗೆ ಕರೆದು ಕೊಂಡು ಹೋದಾಗ ನಮಗೆ ಅಣತಿ ಇತ್ತ.

"ನೀವೆಲ್ಲಾ ಇಲ್ಲೇ ಇರಿ! ಬೇಗ ಬಂದುಬಿಡ್ತೇನೆ" ಎಂದು.

ಮುಂಜಾನೆ ಮನೆಗೆ ಹೋದಾಗ ಯಾರಿಗೆ ಸ್ವಾತಂತ್ರ್ಯ ಎಂದೇ ಅಂದುಕೊಂಡೆವು ಅರಳು ಮರುಳು ನಸು ನೆನಪಿನಲ್ಲಿ.



ಶಾ. ನಾ. ಕಜಗಂಸನವರು ಬಂದು ವಿಗ್ರಹ ಒಡೆಯದೆ ಇರಲಿ ಅಂತ
ಹೀಗೆ ಪಾಪಾಸ್‌ಕಳ್ಳಿ ಬೆಳೆಸಿದ್ದಾರ್ರೀ!

ನನ್ನ ತಂದೆ ತಾಯಿಗಳ ಗೋಳು

ನನಗಿನ್ನೂ ಸರಿಯಾದ ಒಂದು ಹೆಸರನ್ನೇ ಇಟ್ಟಿಲ್ಲ, ತಂದೆ ತಾಯಿ ಅನ್ನಿಸಿಕೊಂಡಿರೋರು, ಬೇಬಿ ಅಂತಾನೆ ಅಪ್ಪ, ದೊರೆ ಅಂತಾಳೆ ಅಮ್ಮ! ಅಷ್ಟರೊಳಗೆ ಅವರಿಗೆ ಅವಸರ, ನಾನು ದೊಡ್ಡವನಾಗಿ, ನನಗೆ ಚಿಗುರುಮೀಸೆ ಬರುವಾಗ ನನ್ನನ್ನ ಯಾವ ಕಾಲೇಜಿಗೆ ಸೇರಿಸಬೇಕು, ಎಂದು ನಿಶ್ಚಯಿಸುವುದಕ್ಕೆ! ಈಗಲೇ ಮೂರು ಸಾವಿರವೋ ನಾಲ್ಕು ಸಾವಿರವೋ ದತ್ತಿಕೊಟ್ಟು, ಮುಂದಿನ ಬುತ್ತಿ ಕಟ್ಟಬೇಕಂತಲ್ಲಾ ಆದ್ದರಿಂದಲೇ ಅವರಿಗೆ ಕಳವಳ, ಚಿಂತೆ, ಮುಂದೆ ನಾನೇನಾಗುತ್ತೇನೆ, ನನ್ನನ್ನ ಯಾವ ಕಸಬಿಗೆ ತಿರುಗಿಸಬೇಕು, ನನ್ನ ಒಳ ಚೈತನ್ಯ ನನ್ನನ್ನ ಎತ್ತಲಾಗೆ ಎಳೆಯುತ್ತಾ ಇದೆ, ಅಂತ ಪತ್ತೆ ಹಚ್ಚುವುದಕ್ಕೆ. ಯಾವುದೋ ಕಾಲದಲ್ಲಿ, ರಾಜಮನೆತನದಲ್ಲಿ ಮಕ್ಕಳೇ ಇಲ್ಲದಿದ್ದಾಗ, ಹತ್ತಾರು ಅರಸು ಮಕ್ಕಳನ್ನ ಒಂದು ಕೋಣೆಯೊಳಗೆ ಸೇರಿಸಿ, ಅಲ್ಲಿ ಹರಡಿದ್ದ ಕನ್ನಡಿ, ಕತ್ತಿ, ಕಾಕಂಪಪ್ಪು, ಕಲ್ಲು, ಕಲ್ಲುಸಕ್ಕರೆ ಇವುಗಳ ಪೈಕಿ, ಕತ್ತಿಯನ್ನ ಯಾವ ಹೈದ ಕೈಗೆ ತೆಗೆದುಕೊಳ್ಳುತ್ತಾನೆ, ಅಂತ ಮಂತ್ರಿಗಳು ಕಿಟಕಿಯಿಂದ ನೋಡುತ್ತಾ ಇದ್ದರಂತಲ್ಲಾ, ಹಾಗಾಯಿತು, ನನ್ನ ಪಾಡು, ನನ್ನ ತಂದೆ ತಾಯಿ ಪೇಚಾಟ.

ನಾನು ನಿದ್ದೇಲಿ ಮಾತಾಡುತ್ತೇನಂತೆ, ಆದ್ದರಿಂದ ನನ್ನ ತಾಯಿ ಮೊನ್ನೆ ವಾದಿಸುತ್ತಾ ಇದ್ದಳು, ನಾನು ಲಾಯರಾಗುತ್ತೇನೆ, ಆದ್ದರಿಂದ ನನಗಾಗಿ ಒಂದು ಲಾ ಕಾಲೇಜು ಸೀಟಿಗೋಸ್ಕರ ನಾಲ್ಕು ಸಾವಿರ ಕಟ್ಟೇಬಿಡಿ, ಅಂತ! ಆದರೆ, ನನ್ನ ತಂದೆ ಹೇಳುತ್ತಾ ಇದ್ದ ಅವಳಿಗೆ, ಹೋಗೇ! ನಿನಗೆ ಬುದ್ಧಿ ಇಲ್ಲ.. ನಿನ್ನೆ ನಮ್ಮ ಬೇಬಿ ಆ ಪಕ್ಕದ ಮನೆ ಶಾರದೆ ಹತ್ತಿರ ನಮ್ಮ ಮನೆ ಕರು ತಪ್ಪಿಸಿಕೊಂಡು ಹೋದ ಕಥೇನ ಹೇಗೆ ವಿವರಿಸುತ್ತಿದ್ದ, ಉಪ್ಪು ಖಾರ ಸೇರಿಸಿ, ಹುಲಿಯೇ ಬಂದು ಎತ್ತಿಕೊಂಡು ಹೋಯಿತು, ಆದರೆ, ಕರು ಅಂಬಾ ಅಂದಾಗ ಹುಲಿ ಹೆದರಿಬಿಟ್ಟಿತ್ತು, ಕೆಳಕ್ಕೆ ಹಾಕಿ ಓಡಿಬಿಡ್ತು, ಅಂತ ಹೇಳಿಲ್ಲವೆ, ನಿನ್ನ ದೊರೆ....ಇದನ್ನ ಗಮನಿಸಿದರೆ, ಅವನು ಪತ್ರಿಕಾ ಪ್ರಪಂಚಕ್ಕೇ ಲಾಯಕ್ಕಲ್ಲವೇನೇ .. ... ನಾಳೆಯೇ ಮೂರು ಸಾವಿರ ತೆತ್ತು, ಇವನಿಗೆ ಜರ್ನಲಿಸಂ ಕಾಲೇಜಿನಲ್ಲಿ ಒಂದು ಸೀಟು ಸಂಪಾದಿಸಿಬಿಡುತ್ತೇನೆ, ಅಂದ. ಮತ್ತೊಂದು ದಿವಸ, ಬೆಳಗ್ಗೆ, ಇಬ್ಬರು ಎದ್ದಿದ್ದಾರೆ. ಆಗಲೇ ಜಗಳ ಪ್ರಾರಂಭ....ನನ್ನ ವಿಷಯವಾದ ಜಗಳ! ನಾನು ನಮ್ಮ ತಾತನ ಎಲೆ ಅಡಿಕೆ

ಚೀಲದಿಂದ ನಾಲ್ಕಾಣೆ ಕದ್ದಿನಂತೆ...ಆದ್ದರಿಂದ ನನ್ನನ್ನ ಬ್ಯಾಂಕಿಂಗ್ ಪರೀಕ್ಷೆಗೇ ಓದಿಸಬೇಕಂತೆ, ನನ್ನ ತಾಯಿ ಹಟ! ಬೇಡ, ಬೇಡ, ಅವನ ಮನಸ್ಸು ಯಾವ ಕಸಬಿನ ಕಡೆ ವಾಲುತ್ತಾ ಇದೆ ಅಂತ ನಾನು ಪತ್ತೆ ಹಚ್ಚಿದೇನೆ, ಅಂತ ನಮ್ಮಪ್ಪನ ಕೂಗು! ನೋಡೆ! ನಿನ್ನೆ ಸಂಜೆ ಬಿಲ್ಲು ಬಾಣ ಅಂತ ಆಟ ಆಡುತ್ತಾ ಇದ್ದರಲ್ಲಾ, ಹುಡುಗರು....ನಮ್ಮ ಬೇಬಿ, ಆ ಬಿಲ್ಲನ್ನು ತನ್ನ ಕೈಲಿಟ್ಟುಕೊಂಡು, ಲ್ರೋ! ನನಗೆ ಮೂರು ಕಾಸು ಕೊಟ್ರೇನೇ ಈ ಬಿಲ್ಲು ನಿಮ್ಮ ಕೈಗೆ ಕೊಡೋದು, ಅಂದ.... ಕೇಳಿಸ್ತೇನೆ ಆದ್ದರಿಂದ, ಅವನು ಎಂಜಿನೀರಿಂಗ್ ಇಲಾಖೆಗೋಸ್ಕರವಾಗಿಯೇ ಅವತಾರ ಎತ್ತಿದಾನೆ—ಇವತ್ತೇ ಹತ್ತು ಸಾವಿರ ದತ್ತಿಕೊಟ್ಟು, ಇವನಿಗೆ ಅಗಲವಾದ ಒಂದು ಸೀಟು ರಿಸರ್ವ್‌ಮಾಡಿಸಿಬಿಡುತ್ತೇನೆ, ಸುಮ್ಮನಿರು ಅಂದ, ಅಪ್ಪ! ಈ ಜಗಳ ಒಂದು ವಾರದುದ್ದಕ್ಕೂ ನಡೆಯಿತು. ಭಾಷೇನ ತಪ್ಪು ತಪ್ಪಾಗಿ ಆಡಿದ, ಆದ್ದರಿಂದ ಇಂಗ್ಲೀಷ್ ಆನರ್ಸ್‌ಗೆ ಸೇರಿಸಬೇಕು, ಅಂತ ನಮ್ಮಪ್ಪ! ಮಾತಾಡುವುದಕ್ಕೆ ಶುರು ಮಾಡಿದರೆ, ಕೊನೆ ಮೊದಲೇ ಇಲ್ಲ, ಆದ್ದರಿಂದ ಓದಿಸಲೇಬೇಕಾಗಿಲ್ಲ, ರಾಜಕೀಯಕ್ಕೆ ನುಗ್ಗಿ ಮಂತ್ರಿಯಾಗಲಿ, ಅಂತ ನಮ್ಮಮ್ಮ! ಈ ಜಗಳ ಹೇಗೆ ತಾನೆ ಪೂರೈಸುತ್ತಿದೆ? ಪಕ್ಕದ ಮನೆ ಹುಡುಗಿಯ ಜಡೆ ಹಿಡಿದು ಜಗ್ಗಿಸಿದ, ಆದ್ದರಿಂದ, ಸುಪ್ರಸಿದ್ಧ ಕಾದಂಬರಿಕಾರನಾಗುತ್ತಾನೆ, ಕಾದಂಬರೀನ ಸಿನಿಮಾದವರು ಆರಿಸುತ್ತಾರೆ, ಅಂತ ನಮ್ಮಪ್ಪನ ನಿಶ್ಚಯ; ಬಾಳೆ ಗಿಡಕ್ಕೆ ಗುಂಡು ಸೂಜಿ ಚುಚ್ಚುತ್ತಾ ಇದ್ದ ಬೆಳಗ್ಗೆ, ನಾನು ಕಣ್ಣಾರೆ ನೋಡಿದೆ, ಮೆಡಿಕಲ್ ಕಾಲೇಜೇ ಗತಿ ನನ್ನ ದೊರೆಗೆ, ಕಳುಹಿಸಿ ಬಿಡಿ ನಾಳೇನೇ ಆರು ಸಾವಿರ, ಅಂತ ನಮ್ಮಮ್ಮನ ಅಹವಾಲು! ಮಕ್ಕಳಿಗೆಲ್ಲ ಕೋಡುಬಳೆ ಹಂಚಿದರೆ, ಈ ಹುಡುಗ ಮಾತ್ರ, ಉಳಿದವರೆಲ್ಲ ತಿಂದ ಮೇಲೆ, ತನ್ನ ಕೋಡುಬಳೆಗಳನ್ನ ಈಚೆಗೆ ತರುತ್ತಾನೆ, ಅವು ಪಾಪ, ಚೂರು ಕೊಡೋ ಅಂದರೆ, ನಿನ್ನ ಪೆನ್ಸಿಲ್ ಕೊಡು, ನಿನ್ನ ನವಿಲುಗರಿ ಕೊಡು ಅಂತ ಒತ್ತಾಯಪಡಿಸಿ, ಆ ಪದಾರ್ಥಗಳನ್ನೆಲ್ಲ ಲಪಟಾಯಿಸುತ್ತಾನೆ, ಕರೀಪೇಟೆ ವರ್ತಕನಾಗಿ ಬಂಗಲೆಗಳನ್ನು ಕಟ್ಟಿಕೊಳ್ಳುತ್ತಾನೆ, ನನ್ನ ಮಗ ಜಾಣ ಅಂತ, ಮತ್ತೊಂದು ದಿನ ಅಮ್ಮ ವಾದಿಸಿದಳು; ಹೋಗ! ಹೋಗೆ! ನಿನ್ನೆ ನೋಡಿದೆಯೋ ಇಲ್ಲವೋ? ಕುರಿಮಂದೆ ಒಂದನ್ನ ಯಾವನೋ ಅಟ್ಟಿಸಿಕೊಂಡು ಹೋಗ್ತಾ ಇದ್ದರೆ, ನಿನ್ನ ಮಗ ಅವನ ಹತ್ತಿರ ಹೋಗಿ, ದೊಣ್ಣೆ ನನ್ನ ಕೈಗೆ ಕೊಡೋ, ಅಂದದ್ದನ್ನ .. ನಿನ್ನ ದೊರೆ....ಶಾಲಾ ಮಾಸ್ತರಾಗ್ತಾನೆ ಕಣೆ, ಟೀಚರ್ಸ್ ಕಾಲೇಜಲ್ಲೇ ಅವನಿಗೆ ಸೀಟು, ಅದಕ್ಕೇನು, ಮುಂಗಡ ಹಣವೇನೂ ಬೇಕಿಲ್ಲ, ಅಂತ ನಮ್ಮಪ್ಪ .. ನಮ್ಮಮ್ಮ ಅತ್ತೇಬಿಟ್ಟಳು. ಏಕೆ? ಶಾಲಾಮಾಸ್ತರು ಅಂದರೆ, ಅಷ್ಟು ಹೀನಾಯವೆ? ನನಗೇನೂ ತಿಳಿಯದು ... ಇವರಿಬ್ಬರೂ ಪೇಚಾಡುತ್ತಿದಾರೆ, ಅನ್ನೋದು ಮಾತ್ರ ಗೊತ್ತು.... ಪಾಪ! ಮಕ್ಕಳನ್ನು ಪಡೆದರೆ, ಇದೊಂದು ಗೋಳು ಬೇರೇನೇ?

—ಬಾಲು,

ಬುರ್ಕಿ

ಬುರ್ಕಿಯೊಂದನೇಕೆ ನಾನು, ಗಂಡು, ಧರಿಸಕೂಡದು ?
ಹೆಣ್ಣು ಮಾತ್ರವೇನು ಪುಣ್ಯಮಾಡಿ ಹುಟ್ಟಿತು ?
ಬೇಸ್ತು ತಿಂದ ಮೂತಿಯನ್ನು ಬುರ್ಕಿಯಿಂದ ಮುಚ್ಚಿ ನಾನು
ದೋಸ್ತಿಗೂ ತಿಳಿಯದಂತೆ ಮನೆಯ ಸೇರಬಾರದೆ ?
ಬಾಸು ನನ್ನ ಬೈದು ಕೆಡವಿ, ಅವಳು ನನಗೆ ಆರತಿ
ಎತ್ತಿ ಆಚೆ ಕಳಿಸಿದಾಗ, ಬುರ್ಕಿ ಎಂಥ ರಕ್ಷಣೆ!
ರಸ್ತೆಯಲ್ಲಿ ರಾಮು ಸಿಕ್ಕಿ, ಅಲ್ಲೆ ಅವನು ಗಂಟೆಕಾಲ
ಬೋರುಮಾಡುವಾಗ, ಬುರ್ಕಿ, ಎಷ್ಟು ಹಿತಕರ!
ಓಟಿನಲ್ಲಿ ಸೋತು ಮತ್ತೆ ಊರಿಗಾನು ಹೊರಡುವಾಗ
ನಂಟರಿಷ್ಟರೆದುರಿಗೆಲ್ಲ ಬುರ್ಕಿ ಉತ್ತಮ!
ಲೋಕಸಭೆ ರಾಜ್ಯಸಭೆ ಅಸೆಂಬ್ಲಿ ಕೌನ್ಸಿಲಲ್ಲಿನಾ
ಬುರ್ಕಿ ಹಾಕಿ ಅದರ ಹಿಂದೆ ನಿದ್ದೆಮಾಳ್ಪೆ ಸುಖದಲಿ
ನನಗೆ ಮಾತ್ರವಲ್ಲ ಬುರ್ಕಿ! ಅವಗೂ ಇವಗೂ ಒಳ್ಳಿತು,
ಹಾಳು ಮೂತಿ ಕೀಳು ಮೂತಿ ಎಲ್ಲ ಮುಚ್ಚಬಲ್ಲದು
ಬುರ್ಕಿಯಿಂದ ಈಗ ಎಷ್ಟು ಹೊಲಸು ತಪ್ಪಿತೋ
ಅಷ್ಟೆ ಹೊಲಸು ತಪ್ಪುವುದು, ಗಂಡು ತೊಟ್ಟರೂ.
ಬುರ್ಕಿ ಹಿಂದೆ ಅವಿತು ನಾವು ಬಹಳ ಚೇಷ್ಟೆ ಮಾಳ್ಪೆವು
ಸಭ್ಯರೆಂದು ನಟನೆಮಾಡೆ, ಬುರ್ಕಿ ಸಾಧನ.

—ಕಾಮತ್.

ಪ್ರಾಣೇಶ ಪ್ರಸಂಗ

ಅಣುಶಸ್ತ್ರಾಸ್ತ್ರಗಳ ಪ್ರಯೋಗಾರ್ಥ ಸ್ಫೋಟನಗಳು ನಿಲ್ಲಬೇಕೆಂದು ದೊಡ್ಡ ರಾಷ್ಟ್ರಗಳನ್ನುದ್ದೇಶಿಸಿ 'ನವದುಂಧುಭಿ'ಯಲ್ಲಿ ಪ್ರಕಟವಾದ ಬಹಿರಂಗ ಪತ್ರವನ್ನೋದಿ ಡಲ್ಲೇಶಾದಿಗಳು ಎರಡೆರಡು ಸ್ಫೋಟನಗಳನ್ನು ಹೆಚ್ಚಾಗಿ ನಡೆಸಿದರೆಂಬ ಸುದ್ದಿಗೆ ತಳವಿಲ್ಲ. ಪ್ರಾಣೇಶನಿಗೆ ಆ ಕುರಿತು ಏನೂ ಬೇಸರವಿಲ್ಲ. ಆದರೆ ಆ ಬಹಿರಂಗ ಪತ್ರದೊಂದಿಗೆ ಅದೇ ಸಂಚಿಕೆಯಲ್ಲಿ ಬೇರೊಂದು ಲೇಖನವನ್ನು ಪ್ರಕಟಿಸಿದ್ದರ ಫಲವಾಗಿ ಆತ ತಲೆಸಿಡಿತವನ್ನನುಭವಿಸಬೇಕಾಯಿತು.

ಇವನಿಗೆ ಜಾಗ ಭರ್ತಿಮಾಡೋದಕ್ಕೆ ಬೇರೇನೂ ಇರಲಿಲ್ಲವೆ? ಬರವಣಿಗೆ ಯವರ ಪರಿಚಯಮಾಡಿಕೊಡೋದಕ್ಕೆ ಹೋಗಬೇಕೆ? ತಾನೇ ಒಂದು ತುಂಡು ಕಾವ್ಯ ಬರೆದು ಜಾಗ ಭರ್ತಿಮಾಡಬಹುದಿತ್ತು. ಅದನ್ನು ಓದುವವರೇ ಇರುತ್ತಿದ್ದಿಲ್ಲ ವಾದ್ದರಿಂದ ಅವನು ಯಾರ ಆಗ್ರಹಕ್ಕೂ ಪಾತ್ರನಾಗುತ್ತಿದ್ದಿಲ್ಲ. ಅಥವಾ ನನ್ನ ಕೇಳಿದ್ದರೆ 'ಸೌತೆಕಾಯಿಯಲ್ಲಿರುವ ವಿಟಮಿನುಗಳ' ವಿಷಯ ತಜ್ಞರು ಹಾಗೆ ಹೇಳಿದ್ದಾರೆ ಹೀಗೆ ಹೇಳಿದ್ದಾರೆ ಎಂದು ಬರೆದು ಕೇಳಿದಷ್ಟು ಸಾಲು ಕೊಡುತ್ತಿದ್ದೆ. ಅದರ ಹಣೆಬರಹ ಓದಿಯೇ ಜನರು ತಣ್ಣಗಾಗಿ—ಸೌತೆಕಾಯಿಯಷ್ಟು ಕೂಲಾಗಿ—ಮುಂದಿನ ಪುಟ ತಿರುವುತ್ತಿದ್ದರು. ಹಾಗೆ ಬೇಕಿದ್ದರೆ ಅವನ ಹೆಂಡತಿಯೇ ಒಂದು ಹಿಂದೀ ಲೇಖನವನ್ನು ಕನ್ನಡಕ್ಕೆ ಇಳಿಸಿಕೊಡುತ್ತಿದ್ದಳು. ಅಥವಾ ಗೌರತ್ತೆಯನ್ನು ಕೇಳಿದ್ದರೆ ನಿಂಬೆಹಣ್ಣಿನ ಚಿತ್ರಾನ್ನ ತಯಾರಿಸುವ ವಿವರ ಕೊಡುತ್ತಿದ್ದಳು. ಅದೆಲ್ಲ ವನ್ನೂ ಬಿಟ್ಟು ತಾನೇ ಸುಹ್ರವರ್ದಿಗೋ ನೂನಿಗೋ ನಯ ವಿನಯ ಬೋಧಿಸಿ ಒಂದು ಬಹಿರಂಗ ಪತ್ರ ಬರೆದರೂ ಬರೆಯಬಹುದಿತ್ತು. ಹಾಗೇನೂ ಮಾಡದೆ ಬರಹಗಾರರ ಪರಿಚಯಮಾಡಿಕೊಡೋದಕ್ಕೆಹೋಗಿ ಕೆಟ್ಟ, ಪ್ರಾಣಿ! ಒಂದು ಸಾಲು ಪದ್ಯ ಎರಡು ಸಾಲು ಗದ್ಯ ಬರೆದ ನೂರಾರು ಮಂದಿ ತಮ್ಮ ಹೆಸರನ್ನು ಪ್ರಾಣೇಶನ ಪಟ್ಟಿಯಲ್ಲಿ ಕಾಣದೆ ರೇಗಿದರು. ಹಿಂದೊಮ್ಮೆ ಮದ್ದಿನ ಕೆಟಲಾಗನ್ನು ವಿಮರ್ಶೆಮಾಡಿದ್ದಲ್ಲದೆ ಬೇರೆ ಒಂದೇ ಒಂದು ಸಾಲು ಬರೆದು ಹೆಸರು ಕೆಡಿಸಿಕೊಳ್ಳದಿದ್ದಂಥವರೊಬ್ಬರು ತಮ್ಮನ್ನು ಮರೆತುದಕ್ಕಾಗಿ ಮಾನನಷ್ಟಕ್ಕಾಗಿ ದಾವೆ ಹೂಡುತ್ತೇನೆಂದರು. "ನನ್ನ ಹೆಸರು ಯಾಕೋ ಸೇರಿಸಲಿಲ್ಲ?" ಎಂದು ನಾನೂ ರೇಗಿದೆ. "ನಿಮಗೆಲ್ಲರಿಗಾಗಿ ಒಂದು ಸಪ್ಲಿಮೆಂಟ್ ಹೊರಡಿಸುತ್ತೇನೆ ತಲಾ ಐದೈದು ರೂಪಾಯಿ ಕೊಡಿ"—ಎಂದು ಹೇಳುತ್ತಾನೆ! ನೋಡಿ ಅವನ ಸೊಕ್ಕು! ಕೋಪ ಶಾಪಾದಿಗಳಿಂದ ತುಂಬಿದ ಕಾಗದ

ಗಳು ದಿನದಿನವೂ ಬರತೊಡಗಿದವು 'ಕನ್ನಡಮ್ಮನಿಗೆ ಮಹದಪಚಾರವಾಯಿತು' —ತಂತಮ್ಮ ಹೆಸರು ಬಿಟ್ಟುಹೋದ್ದರಿಂದ — ಎಂದು ಎಲ್ಲರೂ ಕೊರಗುವವರೇ! "ಥೂ ಇವರ ಪರಿಚಯಮಾಡಿಕೊಡೋದರ ಬದಲಿಗೆ ಕೊಡೆ ರಿಪೇರಿಯುವರು ನಮ್ಮೂರಿನಲ್ಲಿ ಯಾರು ಯಾರಿದ್ದಾರೆಂದು ವಿಚಾರಿಸಿ ಅವರ ಪರಿಚಯ ಲೇಖನ ಬರೆದಿದ್ದರೆ ಜನಗಳಿಗೆ ಉಪಕಾರವೂ ಆಗುತ್ತಿತ್ತು; ಈ ಗೊಂದಲವೂ ಇರುತ್ತಿರಲಿಲ್ಲ" ಎಂದ ಪ್ರಾಣೇಶ.

ಅಲ್ಲಿಯೇ ಇದ್ದ ಅವನ ಹೆಂಡತಿ "ನಿಮ್ಮಂಥ ಸಂಪಾದಕರಿಗೆ ಹೇಳಿಸಿದ ಕೆಲಸ" — ಎಂದುಬಿಟ್ಟಳು ಕೈಯಲ್ಲಿದ್ದ ಉಲ್ಲನ್ ಉಂಡೆಯನ್ನು ಚೆಂಡು ಹಾರಿಸುತ್ತಾ. ಮೊದಲೇ ತಾಳ್ಮೆಗೆಟ್ಟಿದ್ದ ಪ್ರಾಣೇಶ ಅವಳನ್ನು ಕೆಕ್ಕರಿಸಿ ನೋಡಿದ. ಅಷ್ಟರಲ್ಲಿ ಹಳ್ಳಿಯಿಂದ ಅವಳ ಸೋದರಮಾವ ಬಂದಿದ್ದರಿಂದ ಒಂದು ಪುಟ್ಟ ವಾಗ್ಯುದ್ಧ ನಿಂತು ಹೋಯಿತು.

ದೀಪಾವಳಿಗೆ ಹೋಗಿ ಬಂದಮೇಲೆ ಪ್ರಾಣೇಶ ಹಳ್ಳಿ ಕಡೆಗೆ ಮುಖ ತೋರಿಸಿರಲಿಲ್ಲ. ಕ್ರಾಸ್‌ವರ್ಡ್ ಮಾವನ ವರ್ಷದ ವೈದೀಕಕ್ಕೂ ಹೆಂಡತಿಯನ್ನ ಮಾತ್ರವೇ ಕಳುಹಿಸಿ ಈತ ಎಲೆಕ್ಷನ್ ಗಲಾಟೆಯಲ್ಲಿ ಮುಳುಗಿ ಎಲ್ಲರಿಗೂ ಬೇಸರ ತರಿಸಿದ. ಹುಡುಗಿಗೆ ಏಳು ತಿಂಗಳಾಗಿರುವಾಗ ಈಗಲಾದರೂ ಹೋಗಿ ಆರತಿ ಎತ್ತಿಸಿಕೊಂಡು ಬರಬೇಕೆಂದು ಒತ್ತಾಯಿಸಲು ಮಾವನವರು ಬಂದಿದ್ದು. ಜಮೀನಿನ ಉಸ್ತುವಾರಿಗೆ ಈ ಮಾವ, ಪ್ರೆಸ್ಸಿನ ವಿಷಯಕ್ಕೆ ಗೋಪಣ್ಣ, ಮನೆಕಡೆ ಯೋಚನೆ ಹೇಗೂ ಇಲ್ಲ— ಹೀಗಿರುತ್ತಾ 'ನವದುಂದುಭಿ'ಯಾಯಿತು ತಾನಾಯಿತು ಎಂದುಕೊಂಡಿದ್ದ ಪ್ರಾಣೇಶನಿಗೆ "ಲೋಕ ಎತ್ತ ಸಾಗುತ್ತಿದೆ?" ಎಂದು ಚಿಂತಿಸುತ್ತಿರುವ ಬದಲಿಗೆ ತಾನೆತ್ತ ಸಾಗುತ್ತಿದ್ದೇನೆ ಎಂದು ತಲೆಗೆ ಹಚ್ಚಿಕೊಳ್ಳುವ ದಿನಗಳು ಪ್ರಾರಂಭವಾಗ ವುದರಲ್ಲಿವೆ.

ಅಜ್ಜಿ ಏನೇ ಹೇಳಲಿ ನರ್ಸಿಂಗ್‌ಹೋಮೇ ಸರಿ; ಮಾವನಮನೆ ಬೇಡ ಎಂದುಬಿಟ್ಟಿದ್ದಾಳೆ ಅವನ ಹೆಂಡತಿ. ಅಥ ನಿಕರಲ್ಲಿ ಕೂಸಿಗಿಂತ ಮುಂಚೆ ಕುಲಾವಿ ಹೊಲೆದಿಡುವ ಗೀಳು ಇಲ್ಲವೇನೋ. ಆದರೆ ಗೌರತ್ತೆ ಮಗುವಿಗೆ ಹಾಸುವ ಒಟ್ಟೆಗಳನ್ನು ಆಗಲೇ ಸಿದ್ಧಪಡಿಸಿಟ್ಟಿದ್ದಾರೆ. ಹಾಗಂತ ನಮ್ಮ ಎಮ್ಮೆಲೆ ಮಿತ್ರ ಡಾಕ್ಟರ್ ಕಟ್ಟೂರಯ್ಯನಿಗೆ ಹೇಳಿದೆ. ಆತ ಎಸೆಂಬ್ಲಿಗ ಹೋಗಿ "ಲೋಕದಲ್ಲಿ ಮಗು ಹುಟ್ಟೋದಕ್ಕೆ ಮೂರು ತಿಂಗಳ ಮೊದಲೇ ಹೆಂಗಸರು ಬೇಕಾದ ಸಿದ್ಧತೆ ನಡೆಸಿರುತ್ತಾರೆ; ಆದರೆ 'ಫ್ಲೂ' ಬಂದು ಒಂದು ವಾರವಾದರೂ ನಾಕಷ್ಟು ಜಾಗ್ರತೆ ವಹಿಸಿದ ಹಾಗೆ ಕಾಣುವುದಿಲ್ಲವಲ್ಲ ಸರಕಾರ? ಎಂದು ಮಂತ್ರಿಗಳನ್ನ ಪ್ರಶ್ನಿಸಿಬಿಟ್ಟೋದೆ!

"ಅದರಿಂದ ತಮ್ಮ ಕಿಸೆ ಹೇಗೂ ತುಂಬುತ್ತದಲ್ಲ ತಮಗೇನು ಫಜೀತಿ ಸ್ವಾಮಿ?" —ಎಂಬ ಅಶರೀರವಾಣಿಯಾಯಿತಂತೆ ಆಗ!

—ರಾಮಿ.

ಆ ಕೋಟು

(ನಡೆದ ಕಾವ್ಯಕಥನ)

ರಟ್ಟಿನ ಪೆಟ್ಟಿಗೆಯ ಜಲ್ಲಿ ಕಾಗದ ರಮುರಮುಗುಟ್ಟಿ ಅಚೆ ಈಚೆ ಹರಡಿದಾಗ ಕಣ್ಣು ಕೋರೈಸುವಂತೆ ಒಪ್ಪವಾಗಿ ಮಡಚಿ, ಕೂತಿತ್ತು ಆ ಕೋಟು, ನನ್ನ ಉಣ್ಣೆ ಕೋಟು.

*　　　*　　　*

ಆ ಕೋಟು—ಯಾರ ಮೃದು ಹಸ್ತವನು ಸಂಪಿಗೆಯ ಎಸಳಂತೆ, ಎತ್ತಿ ಎತ್ತಿ ಹಿಡಿದು ಮೃದುವಾಗಿ ಅದುಮಿ, ಗಲ್ಲವನು ಗುಲಾಬಿ ಬಣ್ಣಕೆ ತಿರುಗಿಸಿತ್ತೋ, ಆ ತೋಳೊಳಗೆ ತೂರಿಸಲು ಹದವಾಗಿ ಮೈಗೆ ತಾಗಿ ಕೂತ ಆ ಉಣ್ಣೆಯ ಕೋಟಿನ ತೋಳು ಒಪ್ಪಿತ್ತು ಆ ನನ್ನ ಎರಡು ಕೈಗೆ.

*　　　*　　　*

ಕಿರಿಗೀರು ಮೀಸೆಯ ಮೇಲೆ ಕೈ ಆಡಿಸಿ, ಓಪನ್ ಕಾಲರನ್ನು ತೀಡಿ ಇಸ್ತ್ರಿ ಮಾಡಿ ಕೆಂಪು ಗುಲಾಬಿಯ ಸೆಕ್ಕಿ, ಹಾರವ ಹಾಕಿ ಮಾಡಿದ ವರಪೂಜೆಗೆ ನೂರ್ಮಡಿ ನನ್ನ ಎದೆ ಎಬ್ಬಿಸಿ ಕೂರಿಸಿತ್ತು—ಆ ಮಾನ ಕೊಟ್ಟ ಕೋಟು.

*　　　*　　　*

ಹತ್ತು ತುಂಡು ಉಣ್ಣೆಯ ಒಟ್ಟೆ ರಾಶಿಯ ನಡುವೆ, ಹವಳದಂತಹ ನೆಶ್ಯ ಬಣ್ಣದ ಈ ಕೋಟಿನ ಬಟ್ಟೆಯ ಆರಿಸಿ ತೆಗೆದಿದ್ದೆ.

*　　　*　　　*

ಗೆಳೆಯ — ರಾಮು – ವೆಂಕ – ನಾಣಿ – ಶೀನ – ಅಪ್ಪು – ಭೀಮು – ಬಿ. ಎಂ. – ಗುಡ್ಡು – ಮೊಸ್ಸ – ಎಲ್ಲರೂ ಆರಿಸಿದ್ದರು ಆ ನೆಶ್ಯ ಬಣ್ಣದ ಉಣ್ಣೆ ಬಟ್ಟೆ.

*　　　*　　　*

ಆ ಕೋಟು—ಈ ಹೆಣ್ಣು, ಆ ಜೀವ ಪರ್ಯಂತ ಈ ಪಾಟಿ ನನ್ನ ಬೆನ್ನಟ್ಟಿ ಅಂಟಿಕೊಂಡೇ ಕಾಡುವವೆಂದು, ಆ ನೆಶ್ಯದ ಕೋಟು ಹೊಲಿಸುವಂದು ಮುಂಡೆಗೆ ಏರಿರಲೇ ಇಲ್ಲ.

*　　　*　　　*

ಏಸೊಂದು ಹಸುರಿತ್ತು—ಆ ನನ್ನ ಮನದೆಸ್ನೆ ನನ್ನ ಪಕ್ಕಕೆ ನಿಂತು—ಎಳೆ ನಿಂಬೆ ಕಳೆಯು ಮುಖದಲ್ಲಿ ಸೂಸುತ್ತ—ನಸುನಕ್ಕಾಗ "ನಗಿರೊಮ್ಮೆ" ಎಂದು ಆ ಫೋಟೋಗ್ರಾಫರ ಎಂದಾಗ ನನ್ನ – ಆ ನನ್ನ ಮನದನ್ನೆಯುಪ್ಪ ಕೊಟ್ಟ ಉಣ್ಣೆಯು ಕೋಟು ಅರ್ಧಾಂಗಿ ಅರ್ಧ ಅಂಗನ ಸೋಕಿ ನಿಂತಾಗ, ಅವಳ ಸೌಂದರ್ಯ ಮುಮ್ಮಡಿಸಿತ್ತು— ಆ ನನ್ನ ಕೋಟಿನ ನೆಳಲ ದೆಸೆಯಿಂದ.

*　　　*　　　*

ಶೋಭಿಸಿತ್ತಾ ನಮ್ಮ ಜೋಡಿ -- ನಡೆದಾಗ, ಹೆಜ್ಜೆಯ ಮೇಲೊಂದು ಹೆಜ್ಜೆಯ ನಿಕ್ಕಿ ಲಾಲುಬಾಗಿನ ಕೆರೆಯ ದಂಡೆಯು ಮೇಲೆ, ನಾಜೂಕಾಗಿ— ಈ ನೆಶ್ಯದ ಕೋಟನು ಧರಿಸಿ ಹೊರಟಾಗ— ಸಾಸಿರ ಹೂವುಗಳು ನೋಡಿ ನಕ್ಕವು ನಮ್ಮ ರಸಿಕತೆಯ ಕಂಡು—ನಾಚಲಿಲ್ಲವು ಆ ನನ್ನ ಕೋಟ ತೋಳು—ಹೇಸದೆಯೆ ಎಸೆದಿತ್ತು ಅವಳ ಟೊಂಕದ ಸುತ್ತ.

*　　　*　　　*

ವಾಣಿವಿಲಾಸ ವಾರ್ಡಿನ ಬಾಗಿಲ ಅಂಚಿನಲಿ ರೀಕಾಗಿ ನಿಂತಿದ್ದೆ ಈ ಕೋಟ ಧರಿಸಿ — ನರ್ಸಮ್ಮ ನಸುನಕ್ಕು ನೋಡಿಸಿದಳು, ಪುಟ್ಟ ಕಂದಮ್ಮನ ಪಾಪ— ಪಾಪಚ್ಚಿ ಮಲಗಿತ್ತು ಮಾತೆಯು ಮಗ್ಗುಲಲಿ ಮೊಲೆಯು ಚೀಪುತ್ತ.

ಹೊತ್ತಿಲ್ಲದಾ ಹೊತ್ತಿನಲಿ ವಾರ್ಡಿಗೆ ನುಗ್ಗಿಸಿ ಮಗು - ಬಾಣಂತಿಯು ದರ್ಶನ ಮಾಡಿಸಿತ್ತು ಆ ನನ್ನ ನೆಶ್ಯ ಬಣ್ಣದ—ಮಾನನಿತ್ತಾ ಕೋಟು.

*　　　*　　　*

ವರುಷ ಒಂಭತ್ತಾಯ್ತು—ಒಂದೊಂದಕ್ಕೂ ಒಂಭತ್ತು ತಿಂಗಳು ತುಂಬಿ— ತುಂಬಿದವು ಮನೆ ತುಂಬ ಒಂಭತ್ತು ಕೂಸುಗಳು—ಒಂಭತ್ತು ವರ್ಷದ ಹಿರಿಯು — ಕಿರಿಕೂಸಿಗೆ ಒಂಭತ್ತು ತಿಂಗಳು....ಆದರೂ ಆ ನನ್ನ ಉಣ್ಣೆಯ ಕೋಟು ಈಗ ದರ್ಜಿಯಾವ ಕೊಟ್ಟಂತೆ ಕಂಗೊಳಿಸುತ್ತಿತ್ತು—ನನ್ನ ನೇತ್ರಂಗಳಿಗೆ.

*　　　*　　　*

ವಿರಸವಾಯ್ತು — "ಇತಿಮಿತಿಯೇ ಬೇಡವೆ — ಮತಿಯೇ ಇಲ್ಲವಾಯ್ತೆ ನಿಮಗೆ"— ಎಂದು ನಿತ್ಯ ಪೂಜೆಯು ಮಾಡಿದಳೆನ್ನ ಬಿಳಿಯು ಗಲ್ಲದ ಮಡದಿ. ಕೆಂಪಿದ್ದಾ ಗಲ್ಲವದು ಬಿಳುಪೇರಿ ನಿಂತಿತ್ತು, ಅನಿಮಿಯು ಎಂಬ ಹೆಸರ ಪಡೆದು. "ಬೈಯ್ಯದಿರು ಬಾಲೆ—ಹೊರಡುವೆನು ಹಾಸ್ಪಿಟಲ ಕಡೆಗೆ" ಎಂದು ಏರಿಸುವೆನು ಆ ನನ್ನ ನೆಶ್ಯ ಬಣ್ಣದ ಕೋಟ.

*　　　*　　　*

ಹೇ! ನನ್ನ ನೆಶ್ಯದ ಕೋಟೆ—ಗಿಮಟು ಹಿಡಿದಿತ್ತು ಹೆಕ್ಕತ್ತಿನ ಬಳಿ— ಜೇಬೆಲ್ಲ ತೂತು—ಬಳಿಸಾರಿ ಗೆಳೆಯರು ಚೇಳ ಕಂಡಂತೆ, ಬೆದರಿ ಡಿಕ್ಕೆಟ್ಟು ಓಡುವರು—ಆ ಗಿಮಟು ವಾಸನೆಗೆ ಬೆದರಿ.

*　　　*　　　*

"ಮನೆಬಿಟ್ಟು ಹೊರಡುವೆನು" ಎಂದು ಒಕ್ಕಣ್ಣಿನಲಿ ಅತ್ತಳು ಆ ನನ್ನ ಒಂಭತ್ತು ಹೆತ್ತ ಪುತ್ಥಳಿ. "ಕಾರಣವೇನು ಕೋಮಲಾಂಗಿ" ಎನೆ ತೋರಿಸುವಳು ಹೆಸ್ಕತ್ತಿನ ಗವುಟು ಕೋಟಿನ ಕಡೆಗೆ ಬೆರಳುಮಾಡಿ.

* * *

ಆ ನನ್ನ ಕೋಟು ನೆಶ್ಯದ ಬಣ್ಣದ ಉಣ್ಣೆಯ ಕೋಟಿನ ಆಶೆಗೆ ಕನ್ಯೆಯ ಕೈ ಹಿಡಿದ—ನನ್ನ ಕೋಟು ಇಲ್ಲವಾಯ್ತು.

"ಹಳೆಯ ಪಾಗಿನ ಕಂಬಿ?" ಅಲ್ಲ.

"ಹರಿವ ಲಾರಿಯ ಪಾಲು?" ಅಲ್ಲ.

"ಉರಿವ ಹರಿಯೊಲೆ ಪಾಲು?"

ಹೌದು. ಮಕ್ಕಳ ಕೆಮ್ಮು - ವಾತ - ಪಿತ್ತ - ಶೀತ - ಶ್ಲೇಷ್ಮ - ಜೆಮ್ಮಿ ವೆಂಕಟರಮಣ - ಅವಳ ಅನೀಮಿಯಕೆಲ್ಲ ನೆಶ್ಯದ ಕೂಟ ಗವುಟಿನ ವಾಸನೆಯೆ ಕಾರಣವೆಂದೆಂದನ ಯಾವನೋ ವೈದ್ಯ

ಅತೀವ ಯಾತನೆಯಲ್ಲಿ ಮುಳುಗಿ ಹೇಳುತಿಹೆ ದಾರುಣದ ಕಥೆಯ—ತನ್ನಪ್ಪನೇ ಕೊಟ್ಟಿದ್ದೆಂಬ ಮಮತೆಯ ಗಾಳಿಗೆ ತೂರಿಬಿಟ್ಟು— ನನ್ನ ಪಂಚಪ್ರಾಣದಂತಿದ್ದ ಆ ಉಣ್ಣೆ ಕೋಟನ್ನು— ಮೊನ್ನೆ ಹುಣ್ಣುಮೆ— ಕಾಮನ ಹುಣ್ಣಿಮೆಯ ದಿನ— ಕಾಮಣ್ಣ ಮಕ್ಕಳು.... ಳೆ ಮಕ್ಕಳು ಮಾಡಿದ ಬೆರಣಿ— ಕಟ್ಟಿಗೆ ರಾಶಿಯ ನಡುವೆ - ಹಾಯ್ ವಿಧಿಯೇ ಈ ನನ್ನ ನೆಶ್ಯದ ಒಣ್ಣದ ಉಣ್ಣೆ ಕೋಟು—ಧಗಧಗನೆ ಉರಿಯಿತು— ಕೈಯ್ಯಾರೆ ಇವಳೇ ಹಾಕಿದ ಕಾರಣದಿಂದಾಗಿ.

* * *

—ಈಗ ಮನೆಯಲಿ ವಾಸನೆ ಇಲ್ಲವಂತೆ. ಮಕ್ಕಳ ಕೆಮ್ಮು ವಾಸಿಯಂತೆ. ಅವಳ ಅನಿಮಿಯ ವಾಸಿಯಂತೆ. ನಾನು ಮಾತ್ರ ಸೊರಗುತಿಹೆ—ಕೊರಗುತಿಹೆ— ಆ ನನ್ನ ಕೋಟು ಸತ್ತ ಸೂತಕದ ವ್ಯಥೆಯಿಂದ. ಹೆ! ನನ್ನ ಕೋಟೆ

* * *

ಮರು ದಿನ ಕಾಮನ ಬೂದಿಯ ನೊಸಲಿಗಿಕ್ಕಿ — ಕೋಟಿಗೆ ಚರಮಗೀತೆಯ ಬರೆದು — ಪವಮಾನವ ಹಾಡಿಬಿಡಲು ಹೊರಟೆ ನಸುಬೆಳಕಿನಲೆ ಕಾಮನ ಸುಟ್ಟ ಜಾಗಕ್ಕೆ.

ಏನಚ್ಚರಿಯೋ ಪವಮಾನ? ಕಾಮನ ಕಟ್ಟಿಗೆ ಬೀಮನ ಬೆರಣಿ—ಅಡಿಕೆ ಗೋಟು—ಎಕ್ಕಡದಟ್ಟೆ, ಎಲ್ಲ ಸುಟ್ಟು ಭಸ್ಮವಾಗಿದ್ದಾಗ ನಟ್ಟನಡುವೆ—ಶೋಭಿಸಿತ್ತು —ಚಿರಂಜೀವಿಯ ಕಳೆ ಹೊತ್ತು—ಪುಟಕಿಟ್ಟ ಚಿನ್ನದಂತೆ—ಬೆಂಕಿಗೂ ಬೇಡಾದ ಆ ನನ್ನ ನೆಶ್ಯ ಬಣ್ಣದ ಕೋಟು.

—ದಾಶರಥಿ ದೀಕ್ಷಿತ್.

ಗಾಳ ದರ್ಶನ

ಸರ್ಕಾರದ, ಹಾಗೂ ಅವರಿವರ, ನೆರವಿಲ್ಲದೇನೇ, ಸ್ವ–ಸಾಮರ್ಥ್ಯದಿಂದ, ಸರ್ವ ಸ್ವಾಮಿಯ ದಯೆಯಿಂದ, ಬಾಳಿ ಬದುಕಿ ಬಾಳು ಬೆಳಗೋಣ ಎಂದು ಹೊರಟ ಜೀವನ ಪಥಿಕ, ದೈವದಯೆ ತೋರಿತು ಎಂದಾಗ—

ಸರ್ಕಾರ ಪ್ರತಿಪಕ್ಷವಾಯಿತಂತೆ, ವರಮಾನ ಹಾಗೂ ಸಾವಿನ ತೆರಿಗೆಯ ಅಧಿಕಾರಿಯ ರೂಪದಲ್ಲಿ ಅವನ ವಿರಾಟ್ ಫಾರಂ ಆಯುಧ ಸಹಿತ.

ಆತ ಹಾಕಿದ ಕಾನೂನು ಗಾಳದ ದರ್ಶನವನ್ನು ಅನುಭವಿಸಿದಾಗ, ಪೂರ್ಣ ಅರಿತಾಗ, ಜೀವನ ಪಥಿಕ, ಅವನನ್ನೂ ನೆನೆದು—

ಈ ರೀತಿ ಹಲುಬಿ—ಶಾಂತಿಯನ್ನು ಕಾಣಲೆತ್ನಿಸುತ್ತಾನೆ.



ಕಾಡುವನು ತೀಡುವನು
ಬೆಸ್ತನಂತಿವ;
ಕುಣಿಸುವನು ದಣಿಸುವನು
ಮನವ ಕೆಡಿಸುತ.

ಅಂಕಿ ಅಂಶವಿಲ್ಲದ
ಅಂಕಿ ಅಂಶವಿಲ್ಲದೆ
ನಯವ ಭಯವ ಕಾಣದೆ
ನಿತ್ಯ ತಿಥಿಯ ಮಾಡುತ
ಪ್ರೇತ ಶಕ್ತಿ ತೋರುತ—

ಕರ್ಮ ಮೌನವಾಂತಿದೆ
ಕಾಲ ದೇಶದಲ್ಲಿಯೂ
ದೀನ ಬಡವ ರೇಗುವಂತೆ
ಕಾಣುತಿಹವು ಚಲಿಸದೆ.

ಮೂಡಣದ ಗಗನದಲಿ
ರವಿಯುದಯ ಮುಸುಕಿದೆ ;
ತಳಿರಿನೊಳು ತಂಬೆಲರು
ನಿಟ್ಟುಸಿರ ಬಿಡುತಲಿದೆ.

ಹಾಳಹಣೆಯ ಬೆವರ್ಹನಿಯು
ಥರಥರಿಪುವು ಮನಬಿಂಬಿಸಿ
ಮೇಘದಿಂದ ಜಡಿದು ಬಂದ
ಆಲಿಕಲ್ಲಿನಂದದಿ.

ಹಾಡುತಿರೆ ಬೇಡನೀಗ
ನವ್ಯ ಮಸಣ ರಾಗವ
ಕಸಿವಿಸಿಯಿಹ ಹೊಸಘಾರಮು
ಮುದ್ರೆ ಬಿದ್ದಲಕ್ಕೋಟೆ !

ಕಮಳುಗಳನು ಕೊಯ್ದು ಹರಿದು
ಮಾಲೆಗಳ ನೆಯ್ದು ನೆಯ್ದು
ಬಳಸಿಬಂದು ಸುತ್ತನಿಂದು
ಮಾಲೆ ಹಾಕಿ ಮೆರೆಯಲು—

ಸೊಬಗು ಮೊಗಗಳಳಿಯುವುವು !
ಕಲ್ಪನೆಗಳು ಹಾರುವುವು !
ಬಾಳಕುಡಿಯು ಸವೆಯುವುದು !
ಪ್ರಳಯ ತಾನೆ ಬರುವುದು !

ಸ್ವಾತಂತ್ರ್ಯ ಸಂಗ್ರಾಮದ ಗಾದೆಗಳು

	೧೯೪೭	೧೯೪೭
1.	ಸಾವಿರ ಕುದುರೆ ಸರ್ದಾರ ಮನೆಗೆ ಬಂದರೆ ಖಾಸ್ದಾರ.	ಸಾವಿರ ಟೋಪಿ ಸರ್ದಾರ ಮನೆ ಬಿಟ್ಟರೆ ಖಾಸ್ದಾರ.
2.	ಊರು ಮೇಲೆ ಊರು ಬಿದ್ದಾಗ ಹಿರಿದವನೇ ಬಿಳಿಯ.	ದೂರಿನ ಮೇಲೆ ದೂರು ಬಂದಾಗ ಉಂಡವನೇ ಮಾಜಿ.
3.	ನೆರೆ ನೋಡಿ ಬದುಕೋ! ನಿರ್ಭಾಗ್ಯ ಬ್ರಾಹ್ಮಣ!	ನೆರೆ ನೋಡಿ ಬದುಕೋ ನಿರ್ಭಾಗ್ಯ ಬ್ರಾಹ್ಮಣ!
4.	ತೆನೆ ಕೂಡಿದರೆ ಭತ್ತ, ದನಿಕೂಡಿದರೆ ದಂಗೆ.	ತೆನೆ ಕೂಡಿದರೆ—ತೆರಿಗೆ ಮನಿ ಒಡೆದರೆ, ಹಿಂಗೇ.
5.	ಬಿಳಿಯರ ಮೇಲಿನ ಆಶೆ ದೇಶದ ಮೇಲಿನ ಪ್ರೀತಿ.	ಬಳಿಯರ ಮೇಲಿನ ಆಶೆ ದೇಶದ ಮೇಲಿನ ಮಾತು.
6.	ಕೈ ಕೆಂಪಾದರೆ ಮೈ ನವಿರು!	ಕೈ ಕೆಸರಾದರೆ ಬಾಯಿ ಮೊಸರು.
7.	ಇತ್ತ ಬಾ ಅಂದರೆ—ಬಿಳಿಯಣ್ಣ ಇದ್ದ ಮನೇಲಿ ಝುಂಡಾ ಹೂಡಿದ.	ಇತ್ತು ಬಾ ವೋಟಂದರೆ—ತಮ್ಮಣ್ಣ ಇದ್ದ ಮನೇಲಿ ಕೈ ಚಾಚಿದ.
8.	ರಾಮೇಶ್ವರಕ್ಕೆ ಹೋದರೂ ದೇಶದ ಮೇಲಿನ ಭಾಷೆ ಇತ್ತು.	ರಾಮೇಶ್ವರಕ್ಕೆ ಹೋದರೂ ಭಾಷಾ ಶನಿ ತಪ್ಪಿಲ್ಲ.
9.	ಮಾರುಕ್ಕೆ ಅಂತ ಬಂದೋನು ಕೇರೀಲೇ ಉಳಿದ.	ಮಾಡ್ತೀವೆ ಎಂದು ಬಂದೋನು ಮಾತಾಡ್ತಾ ಉಳಿದ.
10.	ಅಟ್ಟ ಮೇಲೆ ಒಲೆ ಉರಿಯಿತು ಕೆಟ್ಟ ಮೇಲೆ-ಬುದ್ಧಿ ಬಂದಿತು.	ಗೆದ್ದ ಮೇಲೆ-ಬುದ್ಧಿ ಹೋಯಿತು. ಒದ್ದ ಮೇಲೆ-ಮಾನ ಉಳಿಯಿತು.
11.	ಕ್ರಾಂತಿ ಹೂಡಿ ನೋಡು ಮನೆ ಮರೆತು ಕಾಡು.	ಕ್ರಾಂತಿ ಎಂದಂದು ನೋಡು ಮನೆ ಕಟ್ಟಿ ನೋಡಿ.
12.	ಊರೆಲ್ಲಾ ಕೊಳ್ಳೆ ಹೊಡೆದ ಮೇಲೆ ಊರಬಾಗಿಲ ಹಾಕಿದರು.	ಊರೆಲ್ಲಾ ಕೊಳ್ಳೆ ಹೊಡೆದ ಮೇಲೆ ಊರು ಬಿಟ್ಟು ದೆಲ್ಲಿಗೆ ಹೋದರು.

ಮಾರ್ದನಿ

(ಸುಹ್ರವರ್ದಿ ಸಾಹೇಬರಿಗೆ)

ಎನಿತು ದಿನ ಈ ಪದವಿ ಎನಗಿರುವುದು ?
ಜೀವವಿರುವನಕವೂ, ಕಿರಿದು ಕಾಲವೆಯೊ ?
—ಕಿರಿದು ಕಾಲವೆಯೋ.

ಬಳಿಕ ಸಚಿವ ಸ್ಥಾನ ಆವುದೆನಗೆ ?
ಕೇಂದ್ರದಲೊ, ರಾಜ್ಯದಲೊ, ಆವುದಿರದೊ ?
—ಆವುದಿರದೋ.

ಎನ್ನ ದಬ್ಬುವರಾರು ಪೀಠದಿಂದ ?
ಪಾರ್ಟಿಯೊ, ಪ್ರೆಸಿಡೆಂಟೊ, ಎಲ್ಲರೂನೊ ?
—ಎಲ್ಲರೂನೋ.

ರಾಯಭಾರಿಯ ಹುದ್ದೆ ಸಿಗಲಾರದೊ ?
ಅಮೆರಿಕದಿ, ಆಫ್ರಿಕದಿ, ಪೋರ್ಚುಗಲಿನಲ್ಲಿ ?
— ಪೋರ್ಚುಗಲಿನಲ್ಲಿ.

ಎನ್ನ ಸ್ಥಾನಕ್ಕಿನ್ನು ಬರುವರಾರು ?
ಬಲುಕಾಲ ನಿಲುವವರೊ, ನಾಲ್ಕು ದಿನದವರೊ ?
—ನಾಲ್ಕು ದಿನದವರೋ.

ಮರೆಯುವುದು ಲೋಕವಿದು ನಮ್ಮನೆಂದು ?
ವರುಷಗಳ ಮೇಲೆಯೋ, ವರುಷದೊಳಗೊ ?
—ವರುಷದೊಳಗೋ !

(ವಿ. ಸೀ. ಯವರ ಕ್ಷಮೆ ಬೇಡಿ)

ಆಗ್ಗಿಂದಾನೂ ಹೀಗೇನೆ

ಕಾಡಿನಲ್ಲಿ ಬೇಡನೊಬ್ಬನಿದ್ದನಂತೆ. ನಿರುಪಾಯ ಸಾಧುಪ್ರಾಣಿಗಳನ್ನು ಬೇಟೆಯಾಡಿ ಹೆಂಡಿರಮಕ್ಕಳ ಹೊಟ್ಟೆ ತುಂಬಿಸುತ್ತಿದ್ದನಂತೆ. ಪಕ್ಷಿಯೊಂದನ್ನು ಬಾಣ ಬಿಟ್ಟು ಕೊಂದಾಗ, ಬೇಡ ಅದನ್ನು ತೆಗೆದುಕೊಂಡಾಗ, ಮರದ ಬುಡದಲ್ಲಿದ್ದ ಋಷಿಯು, "ಬೇಡ! ಈ ಪಾಪ ಜೀವನ ಸುಖವಲ್ಲ" ಎಂದನಂತೆ. ಮಾತಿಗೆ ಮಾತು ಬೆಳೆದು ಋಷಿ ಹೇಳಿದಂತೆ ಬೇಡ ಗುಡಿಸಲಿಗೆ ಹೋಗಿ ಹೆಂಡಿರು ಮಕ್ಕಳನ್ನು ಕೇಳಿದನಂತೆ. "ನಿನ್ನ ಪಾಪದಲ್ಲಿ ನಾವು ಭಾಗಿಗಳಲ್ಲ ನೀನು ನಮ್ಮ ಹೊಟೆ ಹೊರೆಸುವುದು ನಿನ್ನ ಕರ್ಮ" ಎಂದರಂತೆ ಅವರು.

ಬೇಡ ಹಿಂದಿರುಗಿ ಮರದ ಬಳಿ ಕುಳಿತು ಮರ ಮರ ಎಂದು ಜಪಮಾಡುತ್ತಾ ತಪಸ್ಸಿಗೆ ಕುಳಿತನಂತೆ. ಸುತ್ತ ಹುತ್ತ ಬೆಳೆಯಿತಂತೆ.

ಕ್ರೌಂಚನ ಪಕ್ಷಿಗಳ ಪ್ರೇಮಗೀತ ಕೇಳಿಸಿತಂತೆ. ಕಣ್ಣುಬಿಟ್ಟನಂತೆ. ಆಗ ಇನ್ನೊಬ್ಬ ಪುಟ್ಟ ಬೇಡ, ಗಂಡು ಹಕ್ಕಿಯನ್ನು ಕೊಂದನಂತೆ.

ವಲ್ಮೀಕದ ಬೇಡನಿಗೆ ಕ್ರೌಂಚ ಪಕ್ಷಿಗಳ ಪ್ರೇಮಗೀತೆಯು ತನ್ನ ಸಂಸಾರದ ಸೊಬಗಿನ ದಿನಗಳ ನೆನಪು ಕೊಟ್ಟಿತ್ತಂತೆ.

ಮಾಡಲಾರದವ ಹಾಡುಕ್ಕೆ ಶುರುಮಾಡಿದ ಅನ್ನುಲ್ಲವೇ ಅಂತೇ ಮನಮೋಹಕ ರಾಮಾಯಣವು ರಚಿಸಲ್ಪಟ್ಟಿತಂತೆ—

ಆಗ ವಾಲ್ಮೀಕದ ಬೇಡನಲ್ಲಿ ಹುದುಗಿದ್ದ ನೆನಪು ಅಳಿದುಹೋಯ್ತಂತೆ.

* * *

ಆಜನ್ಮ ಬ್ರಹ್ಮಚಾರಿ ವ್ಯಾಸ. ಪರಾಶರರ ಕ್ಷಣಿಕ ಕಾಮುಕಕ್ಕೆ ಗುರುತಾಗಿ ಅವತರಿಸಿದ್ದನಂತೆ. ಅಘೋರ ತಪಸ್ಸುಮಾಡಿ ಇಂದ್ರಿಯಗಳ ಮೇಲೆ ಪೂರ್ಣ ಹತೋಟಿ ಪಡೆದು ಬ್ರಹ್ಮರ್ಷಿಯಾದನಂತೆ. ಕಾರಣಾಂತರದಿಂದ ಅಮ್ಮನ ಮಾತಿಗೆ ಕಟ್ಟುಬಿದ್ದು ಅಂಬೆಅಂಬಾಲಿಕೆಯರನ್ನೂ ಸೇವಕಿಯನ್ನೂ ಕಂಡನಂತೆ. ಅನುಭವಿಸಿದ ದೇಹಸೌಖ್ಯವನ್ನು ಮನಸ್ಸಿನಲ್ಲಿ ಹುದುಗಿರಿಸಿ ಇಂದ್ರಿಯನಿಗ್ರಹಣಮಾಡಿ ತಿರುಗಿ ತಪಸ್ಸಿಗೆ ಕುಳಿತನಂತೆ.

ಕೆಲಕಾಲವಾದ ಮೇಲೆ "ಕತೆ ಹೇಳಿ" ಎಂದು ಪಡ್ಡೆ ಋಷಿಗಳು ಕೇಳಿದಾಗ ಒಂದು ಹೆಂಗಸಿಗೆ ಐದು ಗಂಡಸರೂ, ಒಂದು ಗಂಡಸಿಗೆ ಮೂರು ನಾಲ್ಕು ಹೆಣ್ಣುಗಳು; ಮನುಷ್ಯನಿಗೆ ರಾಕ್ಷಸ ಹೆಂಗಸು, ರಾಕ್ಷಸ ಮಗುವಿಗೆ ನರಪಿತೃ. ಈ ರೀತಿ ಜೋಡಿಸಿ ಕೂಡಿಸಿ ಮಹಾಗ್ರಂಥವನ್ನೇ ಬರೆದು, ತನ್ನ ಮನಸ್ಸಿನಲ್ಲಿ ಹುದುಗಿದ್ದ ದೇಹ ಸೌಖ್ಯದ ನೆನಪನ್ನು ಅಳಿಸಿದನಂತೆ.

* *

ಬನಾರಸಿನ ಸೀರೆಯುಟ್ಟ ಕಾಶೀರಾಜಕುಮಾರಿ ಬಲು ಚೆಂದುಳ್ಳ ಹೆಣ್ಣಂತೆ. ಪೂರ್ಣಪ್ರಾಯವಂತೆ. ಮದುವೆಗೆಂದು ಯಾವ ರಾಜಕುಮಾರ ಬಂದರೂ ಒಲ್ಲೆ ಒಪ್ಪಿಲ್ಲ ಎಂದನ್ನುತ್ತಿದ್ದಳಂತೆ—ಬರೀ ಕೊಬ್ಬು!!

ದನಕಾಯೋ ಹುಡುಗನೋ — ಕುರಿಕಾಯೋ ಹುಡುಗನೋ ಒಬ್ಬನನ್ನು ಹಿಡಿದು ತಂದು ಬಲು ಶಹಣೆ ಇವ ವರಕವಿ ಎಂದು ಆಕಿಗೆ ತೋರಿದರಂತೆ. ಆಕಿ ಆ ವೇಳೆಗೆ ಬೇಜಾರು ಪಟ್ಟುಕೊಂಡಿದ್ದಳಂತೆ. ನೋಡುಕ್ಕೇನೋ ಲಕ್ಷಣವಾಗಿ ದ್ದಾನೆ. ಶಹಣೆ ಇದ್ದರೂ ಇರಬಹುದು. ಇಲ್ಲದಿದ್ದರೆ ಕಲಿಸಿದರಾಯ್ತು ಎಂದೋ ಏನೋ ಒಪ್ಪಿ ಮದುವೆಯಾದಳಂತೆ. ಆತ ಕಮುಕ್ ಕಿಮುಕ್ ಅನ್ನಲಿಲ್ಲವಂತೆ.

ಕಾಳಿ ಗುಡಿಗೆ ಮಂಗಳಾರತಿ ಮಾಡಿಸಲು ದಂಪತಿಗಳು ಹೋದರಂತೆ ಕಾಳೀ ದೇವಿಯ ಮುಂದೆ ಬಿದ್ದಿದ್ದ ಕುರಿಯನ್ನು ನೋಡಿ, ಇದು ಮರೀನೋ ಇದ್ದಿರಬೇಕು ಎಂದು ಹೇಳಿದನಂತೆ.

ರಾಜಕುಮಾರಿಗೆ ಇವನ ಹುಟ್ಟು ತಿಳಿದುಹೋಯ್ತಂತೆ.

ರಾಜಕುಮಾರಿಯೇ ಕಾಳಿಯಾದಳಂತೆ.

ನಿನಗೆ ಪಾಠ ಕಲಿಸಿ ಬುದ್ಧಿಹೇಳಿ ವಿದ್ಯಾವಂತನ್ನ ಮಾಡೋತನಕ ನಾನು ನಾನೇ ಆಗಿರುತ್ತೇನೆ ಎಂದು ಹಟತೊಟ್ಟು ವಿದ್ಯೆ ಕಲಿಸಿದಳಂತೆ.

ಈ ವ್ಯಾಸಂಗ ಮುಗಿದ ಮೇಲೆ ಕಾಳಿದಾಸ,

"ಜೈ ಜಗಜ್ಜನನಿ" ಎಂದು ಶ್ಯಾಮಲಾ ದಂಡಕವನ್ನೇ ಗುರುದಕ್ಷಿಣೆಯಾಗಿ ರಚಿಸಿದನಂತೆ. "ತಾಯಿ! ನೀನು ನನಗೆ ವಿದ್ಯೆ ಕಲಿಸಿದ್ದೇನೋ ಸತ್ಯ ಆದರೆ, ನಿನ್ನ ಕಾಳಿಕಾ ಅವತಾರವನ್ನು ಕಣ್ಣಾರ ಕಂಡಿದ್ದೇನೆ ಕಾರಣ, ಈ ರಾಜ್ಯದ ಈ ಕಾನೂನಿನ ರೀತ್ಯಾ ನಾನು ವಿವಾಹವಿಚ್ಛೇದನ ಪಡೆದುಹೋಗುತ್ತೇನೆ" ಎಂದು ಹೇಳಿ ಓಡಿಯೇಬಿಟ್ಟನಂತೆ.

ಆದರೆ ಕುರಿಕಾಯುವ ಕಾಲದಲ್ಲಿ, ಮದುವೆಯಾದ ಮುಹೂರ್ತದಲ್ಲಿ ಆಕೆಯ ರೂಪು ಲಾವಣ್ಯಗಳನ್ನು ಮೂಕನಾಗಿ ಅನುಭವಿಸಿದ್ದನಲ್ಲಾ! ಆ ಹುಡುಗಿದ ಆಶಯ ಗಳೆಲ್ಲಾ, ನಾಟಕಗಳಲ್ಲಿ, ಕವನಗಳಲ್ಲಿ ಹೊರಗೆಡಹಿ ಓದುಗರಿಗೆ ಸುಖವನ್ನೂ, ತನ್ನ ಮನಸ್ಸಿಗೆ ತಂಪನ್ನೂ ಎರೆದುಕೊಂಡನಂತೆ.

*   *   *

ಸಮ ಸಮ ಓದುವ ಕಾಲೇಜಿನಲ್ಲಿ, ರಾಜು ಬಲು ಚೂಟಿ ಯುವಕನಂತೆ. ಚರ್ಚಾಗೋಷ್ಠಿಯಲ್ಲಿ ಆತ ಮಾತನಾಡುತ್ತಿದ್ದರೆ ತಲೆಯ ಗುಂಗುರು ಕೂದಲು ಗೊಂಚಲುಗಳು ಕೂಡ, ತಾಳ ಹಾಕುತ್ತಿದ್ದವಂತೆ. ರಾಣಿ ಬಲು ನಾಜೂಕು ಹುಡುಗಿ ಯಂತೆ. ನೇರನೆ ಬೈತಲೆ ತೆಗೆದುಕೊಂಡು, ವಾರನೆ ನೋಟ ಹೂಡಿ, ಭಾಷಣಕ್ಕೆ ಉತ್ತರಿಸಿದಾಗ, ಹೆಗಲಮೇಲಿಂದ ಇಳಿದುಬಂದ ಎರಡೂ ಜಡೆಗಳೂ, ಸಮುದ್ರದ ಅಲೆಗಳಂತೆ ಏರಿಳಿಯುತ್ತಿದ್ದುವಂತೆ.

ಮೇಷ್ಟರುಗಳೆಲ್ಲಾ ಎಂತಹ ಜೋಡಿಯಾಗಬಹುದು ಎಂದಂದುಕೊಂಡರಂತೆ. ಆದರೆ.... ಆದರೆ....

ಭಾಷಣಗಳ ಸೊಂಪಿನಲ್ಲೇ ಇದ್ದ ರಾಜು ನಪಾಸಾದನಂತೆ. ರಾಣಿ ಕೂಡ ನಪಾಸದಳಂತೆ. ಹಿಂದಿನ ಬೆಂಚಿನಲ್ಲೇ ಕೂತಿರುತ್ತಿದ್ದ ಆದರೆ ಮುಂದಿನ ಮಾರ್ಗ ಕಂಡಿದ್ದ ಸೋಮು ಮೊದಲಿಗನಾಗಿ ಉತ್ತೀರ್ಣನಾಗಿದ್ದನಂತೆ. ಸ್ಪರ್ಧಾ ಪರೀಕ್ಷೆಯಲ್ಲಿ ಕೂತು ಮೊದಲಿಗನಾದನಂತೆ.

ರಾಣಿ ಜಾಣೆ, ಅವನ ಮುಖ ಹೇಗಿದ್ದರೇನು? ಎಂದು ಅವನ ಹತ್ತಿರ ಪಾಠ ಹೇಳಿಸಿಕೊಳ್ಳಲು ಹೋದಳಂತೆ.

ಅವನು ಪರೀಕ್ಷೆಯಲ್ಲಿ ಗೆದ್ದಿದ್ದರೂ ಕೂಡ, ಇವಳಿಗೆ ಕಡೆಗೆ ಸೋತನಂತೆ.

ಇದನ್ನೆಲ್ಲಾ ಕಂಡ ರಾಜನಿಗೆ ಹೊಟ್ಟೆಯುರಿಯಾಯ್ತಂತೆ. ಹೊಟ್ಟೆ ಕಿವುಚಿ ಕೊಂಡು, ಕಿವುಚಿಕೊಂಡು ಕಾವ್ಯ ಬರೆಯುಕ್ಕೆ ಶುರು ಹಚ್ಚಿದನಂತೆ.

ನವ್ಯ ಕಾವ್ಯ ಉದ್ಭವವಾಯಿತಂತೆ!

*   *   *

ಆಗಿಂದಾನೂ ಹೀಗೇನೇ!

ಬರೆದೋರೆಲ್ಲಾ ಹುಡುಗಿದ ಸೊಬಗಿನ ನೆನಪನ್ನು ಅಳಿಸಲಿಕ್ಕೇ ಕಾವ್ಯ ಬರೆಯೋದು!

—ಕುಮಾರು.

[ಈ ಲೇಖನದ ವಿಚಾರ ಹೇಗೆ ಎಂದು ನಾವು ಸಂಶೋಧನೆ ನಡೆಸಿಲ್ಲ. —ಸಂ.]

ಪ್ರೇಮ

'ಪ್ರೇಮ....?
ಪ್ರೇಮಕಾಸ್ಪದ
ಹೈ ಹೀಲಿನೆಡಪದ!
ಗಲ್ಲನಡುವಣ ಸೊನ್ನೆ
ಗುಳಿಬಿದ್ದ ಕೆನ್ನೆ!
ಡೊಂಕಾಧರದ ಕೆಂಪು
ಆ ನಗುವಿನ ಇಂಪು!
ಪ್ರೇಮ....?
ಉಸ್ಸೆಂಬ ಬಿಸಿಯುಸಿರು
ಕಾಲಿಗಂಟಿದ ಕೆಸರು
ಕೈಗೆ ಬಂದಾ ಮೊಸರು
ಬೆಳದಿಂಗಳೇ ಬಿಸಿಲು
ಹಣೆಯ ಮೇಲಣ ಕುರುಳು
ಗಿಣಿಯ ಹೋಲುವ ಕೊರಳು
ಜಾಣ ಮಾತುಗಳೆರಡು
ಒಲ್ಲೆ ಒಲ್ಲೆ ಎಂಬಾಟ
ಹಲ್ ಹಲ್ಲು ಕಿರಿದಾಟ
ತುದಿನೋಟದ ಕಣ್ಣು
ತುದಿಗಾಲಿನ ಹೆಣ್ಣು
ಪ್ರೇಮ....?
ಬಡಿದರಾಯಿತು ಗೋಳು ...
ಪತ್ರಂ
ಪುಷ್ಪಂ
ಫಲಂ
ತೋಯದಲಿ ಬೀಳುವೆನೆಂಬ ಬೆರಿದಕೆಯ ಹಟಂ
ಆರತಿ
ಅಕ್ಷತೆ
ಮಿಸ್ಟರವನು
ಮಿಸಿಸವಳು
ಜಗಳ ಜಂಜಡ
ಮುನಿಸು ಮೌನ.

—ಕಾಮತ್.

ಕ್ರಾಂತಿ ದಿನ

ಆಗಸ್ಟ್ ಹದಿನಾರು ಕ್ರಾಂತಿಯ ಶತಮಾನೋತ್ಸವ ದಿನ ಮಾತ್ರವಲ್ಲ; ನಮ್ಮ ಗೋಪಣ್ಣನ ಹುಟ್ಟಿದ ಹಬ್ಬದ ದಿನವೂ ಹೌದು ಹೀಗೆ ಎರಡೂ ದಿನಗಳು ಕೂಡಿ ಬಂದಿದ್ದರಿಂದ ಆತ ತನ್ನ ವರ್ಧಂತಿಯನ್ನು ಭರ್ಜರಿಯಾದ ರೀತಿಯಲ್ಲಿ ಆಚರಿಸಿದ. ಬ್ರಹ್ಮಾನಂದ ಭವನದ ಮಾಳಿಗೆಯಲ್ಲಿ ಆತ ನಮಗೆಲ್ಲ ಕ್ರಾಂತಿಗವಳ ಏರ್ಪಡಿಸಿದ್ದ. ಕ್ರಾಂತಿಗವಳವೇ! ಏಕಂತೀರ? ಹೋಟಲಿನವ, ಕಳಿಂಗ, ಒಂದೊಂದು ತಿನಿಸಿಗೂ ಒಬ್ಬೊಬ್ಬ ಕ್ರಾಂತಿವೀರನ ಹೆಸರಿಟ್ಟು ಹಿಂದು ಮುಂದು ನೋಡದೆ ಗೋಪಣ್ಣನನ್ನು ಸುಲಿದ. ನರಗುಂದದ ಅನ್ನ, ತಾತ್ಯಾ ಭಾತ್, ಕಿತ್ತೂರ್ (ಸ್ಪೆಷಲ್) ಚಟ್ನಿ, ಬಹದ್ದೂರ್ ಪೇಣಿ, ನಾನಾ ಮಿಕ್ಸ್‌ಚರ್. ಝಾನ್ಸಿ ಖೀರು, ಕೊನೆಗೆ ಸಂಗೊಳ್ಳಿ ಮಜ್ಜಿಗೆ—ಹೀಗೆ ಪ್ರತಿಯೊಂದೂ ಒಂದಕ್ಕಿಂತ ಒಂದು ಚೆನ್ನು. (ಅಥವಾ ಹೆಸರು ನೋಡಿ ಚೆನ್ನು ಎಂದು ಭಾವಿಸಿದೆವು) ಸರಿ, ಕ್ರಾಂತಿ ವೀರರಿಗೆ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತಾ ಶ್ರದ್ಧೆಯಿಂದ ಕಬಳಿಸಿದ್ದೂ ಕಬಳಿಸಿದ್ದೇ! ಅದೂ ಕೂಡ ಒಂದು ಕ್ರಾಂತಿಯೇ! ಅಲ್ಲ ಎಂದರೆ ಒಪ್ಪುವಹಾಗಿಲ್ಲ ಏಕೆಂದರೆ ಊಟ ಮುಗಿದು ಕುನ್ವಾರ್ ಸಿಂಗ್ ಬೀಡಾ ಬರುವ ಹೊತ್ತಿಗೆ ನಮ್ಮ ನಮ್ಮ ಜಠರಗಳೇ ಎಂಥ ಕ್ರಾಂತಿ ನಡೆಯಿತೆಂಬುದನ್ನು ಸೂಚಿಸುತಿದ್ದವು ಗೋಪಣ್ಣನಿಗೆ "ನೂರು ವರ್ಷ ಬಾಳಪ್ಪ" ಎಂದು ಹೇಳಿ ಬೇಗ ಬೇಗನೆ ಮನೆ ಸೇರಿದೆವು ಹೆಬ್ಬಾವಿನ ಕಾರ್ಯಕ್ರಮಕ್ಕೆ

ಮನೆ ಸೇರುವ ಹೊತ್ತಿಗೆ ಶತಮಾನೋತ್ಸವದ ವಿಶೇಷ ಸಂಚಿಕೆಗಳು ಚಲ್ಲಾಪಿಲ್ಲಿಯಾಗಿ ಬಿದ್ದಿದ್ದವು ಸಂಬಂಧಪಟ್ಟವರು ಚಿತ್ರಗಳನ್ನೆಲ್ಲ ಕತ್ತರಿಸಿಕೊಂಡುಬಿಟ್ಟು ಕ್ರಾಂತಿಯುಂಟುಮಾಡಿದ್ದರು, ಪತ್ರಿಕೆಗಳ ಒಳಗೂ ಹೊರಗೂ ಅವಶೇಷಗಳಾದರೂ ದಪ್ಪವಾಗಿಯೇ ಇದ್ದವು. ಒಂದೊಂದನ್ನೇ ತೆಗೆದುಕೊಂಡು ಪುಟ ಮಗುಚಿದರೆ ಲೇಖನಗಳೇ ಸಿಗಲೊಲ್ಲವು. ಎಲ್ಲೆಲ್ಲೂ ಬರೇ ಜಾಹಿರಾತುಗಳೇ ಇಷ್ಟರಲ್ಲಿ ಬ್ರಹ್ಮಾನಂದ ಭವನದ ಕ್ರಾಂತಿಯಿಂದಲೋ ಏನೋ ಕಣ್ಣು ಕೂಡ ಮಂಜಾಗತೊಡಗಿತ್ತು. ದಿಂಬು ತರೋಣ ಎಂದು ಒಳಗೆ ಹೊರಟರೆ ಅಲ್ಲಿ ಕೂಡ ಕ್ರಾಂತಿಯ ಮಾತುಕತೆ ಕೇಳಿಬರುತ್ತಿತ್ತು ಮಹಿಳಾ ಸಭೆಯಲ್ಲಿ ಕೊಂಚ ಕದ್ದು ಕೇಳಿದೆ. ಗಾಂಧೀ ಮೈದಾನಿನಲ್ಲಿ ಅವತ್ತು ನಿಲ್ಲಿಸಿಟ್ಟ ಲಕ್ಷ್ಮೀಬಾಯಿಯ ಪ್ರತಿಮೆ ವಿಚಾರ. ಏನಂತೆ? ವಿಗ್ರಹದ ಚೋಳಿಯ ತೋಳಿನ cut ನಿಜವಾಗಿಯೂ ಒಂದು ಕ್ರಾಂತಿಯಂತೆ!

ಇಂಥ ಕ್ರಾಂತಿಯ ಮಾತುಕತೆ ನಡೆದಿರುವಾಗ ನಡುವೆ ಹೋಗುವುದು ಕ್ಷೇಮವಲ್ಲ ವೆಂದುಕೊಂಡು, ಪತ್ರಿಕೆಗಳನ್ನೆಲ್ಲ ಜೊತೆಗೆ ಸೇರಿಸಿ ಒಂದು ಘನವಾದ ದಿಂಬು ತಯಾರಿಸಿ ಮಂಚಶಾಯಿಯಾದೆ

ಆಗ ನೋಡಿ ಪ್ರಾರಂಭವಾಯಿತು ಧಾಳಿ. ಕುದುರೆಗಳ ಖುರಪುಟ ಧ್ವನಿ, ಬೂಟುಗಳ ಸಪ್ಪಳ ನಡು ನಡುವೆ ತೋಪಿನ ಘರ್ಜನೆ ಈಟಿ ಕತ್ತಿಗಳ ಝಣ ಝಣತ್ಕಾರ ಅಯ್ಯೋ, ಅಶ್ವಾರೋಹಿಗಳೂ ಕಾಲಾಳುಗಳೂ ನನ್ನ ಎದೆಯ ಮೇಲೆಯೇ ಹಾದು ಹೋಗತೊಡಗಿದರು. ಸಾಲದ್ದಕ್ಕೆ ಮುಖಂಡರಲ್ಲೋ ಒಬ್ಬೊ ಬ್ಬರೂ ನನ್ನನ್ನು ಜರೆದರು ಅಷ್ಟಿಷ್ಟಲ್ಲ. ಥೂ ನಿನ್ನ ಕ್ರಾಂತಿಯ ಉತ್ಸವ ಆಚರಿ ಸುತ್ತಿಯ ಅಂತ ಮೂಗಿನ ತನಕ ಹೊಡೆದುಬಿಟ್ಟು ಬಿದ್ದಿದೀಯ ?" ಎಂದ ಒಬ್ಬಾತ. "ಅಲ್ಲ ಗೋಪಣ್ಣನ ಹುಟ್ಟಿದ ಹಬ್ಬ" ಎನ್ನಲು ಪ್ರಯತ್ನಿಸಿದೆ. ಆದರೆ ಮಾತೇ ಹೊರಡಲಿಲ್ಲ "ಮೂರ್ಖ ಶಿಖಾಮಣಿಗಳೇ, ಪತ್ರಿಕೆಗಳಲ್ಲಿ ಬೀಡಿ ನಶ್ಯಗಳ ಜಾಹಿ ರಾತುಗಳ ನಡುವೆ ನನ್ನ ಚಿತ್ರ ಹಾಕಿದೀರಿ, ಮೈದಾನಿನಲ್ಲಿ ಅವಲಕ್ಷಣದ ಪ್ರತಿಮೇನ ನೆಟ್ಟಿದೀರಿ" ಎಂದು ಹೆಣ್ಣುದನಿಯೊಂದು ಚೀರಿತು. "ಕ್ರಾಂತಿ ಹಾಗಿತ್ತು ಹೀಗಿತ್ತು ಅಂತ ಅಸಂಬದ್ಧವೆಲ್ಲ ಬರೆದು, ಒಬ್ಬರಿಂದೊಬ್ಬರು ಕದ್ದು ಪ್ರಕಟಿಸಿದ್ದೀರಲ್ಲೋ, ಕಂಡ ಕಂಡಲ್ಲಿ ಎಂದಿತು ಇನ್ನೊಂದು ಧ್ವನಿ "ಕ್ರಾಂತಿಯ ಉತ್ಸವ ಅಂದುಕೊಂಡು ಮನಸ್ಸಿಗೆ ಬಂದಂತೆ ಮಜಾಮಾಡಿದ್ದೀರಿ. ಅನ್ನ ನೀರು ಬಿಟ್ಟು, ಜೀವದ ಹಂಗು ತೊರೆದು ಅಂದು ಕಾದಿದ್ದು ನಾವು. ಕಳ್ಳಕೊರಮ ಸ್ವಾರ್ಥಿಗಳಾದ ನಿಮ್ಮ ಹಾಗೆ ವೇದಿಕೆ ಹತ್ತಿ ಧಪ್ಪ ಧಪ್ಪ ಮಾತನಾಡಿದ್ದಲ್ಲ. ಹೊಟ್ಟೆಗಿಲ್ಲದವರನ್ನ ಹೊರಗೆಬಿಟ್ಟು ನಮ್ಮ ಪಾಡಿಗೆ ನಾವು ಖುಷಿಪಟ್ಟಿದ್ದಲ್ಲ"— ಎಂದು ಭಯಂಕರವಾಗಿ ಗರ್ಜಿಸಿದ ಇನ್ನೊಬ್ಬ ಅಯ್ಯೋ ಅವನ ಟೋಪಿಯೇ ಮೂರು ಮೊಳ ಉದ್ದ! ಯಾರಿವನು ? ತಾತ್ಯಾಟೋಪಿಯೆ ? ಹಿಂದೆ ಚರಿತ್ರೆ ಪುಸ್ತಕ ಓದುವಾಗ ನನಗೆ ಹಾಗನ್ನಿಸಿತ್ತು. ಆತನೇ ಇರಬೇಕು....

"ಎದ್ದೇಳಯ್ಯ"—ಎಂದು ಗುಡುಗಿನಂಥ ಧ್ವನಿ ಕೇಳಿಸಿತು. ಉದ್ದ ಟೋಪಿ ಯವನ ಕುದುರೆ ಲಟ್ ಅಂತ ಒಂದು ಒದೆ ಕೊಟ್ಟು ನೆಗೆದು ಓಡಿತು ಕಣ್ಣು ತೆರೆದರೆ ಎರಡು ಕಾಲಿನ ಹಯಗಳು ನನ್ನ ಸುತ್ತಮುತ್ತ ನಿಂತು ನಗುತ್ತಿದ್ದವು. ಕ್ಷಣಮಾತ್ರದಲ್ಲಿ ನನ್ನ ತಲೆದಿಂಬಿನ ಸಾಮಗ್ರಿಗಳು ಒಂದೊಂದಾಗಿ ಜಾರಿಹೋದವು. ಗಂಟೆ ಆಗಲೇ ನಾಲ್ಕು.

ಮುಂದಿನ ಕಾರ್ಯಕ್ರಮ ಯಾವುದೆಂದು ಚರ್ಚೆ ಪ್ರಾರಂಭವಾಯಿತು. ಸಭೆಯೋ, ಭಾಷಣವೋ, ನೃತ್ಯ ಪ್ರದರ್ಶನವೋ, ಫುಟ್‌ಬಾಲ್ ಮ್ಯಾಚೋ, ಬಾಲ್ ಕುಣಿತವೋ, ಶತಮಾನೋತ್ಸವಕ್ಕೆ ಸ್ಪೆಷಲ್ ಆಗಿ ತರಿಸಿದ್ದೆಂದು ಚಿತ್ರ ಮಂದಿರದವನು ಹೇಳುವ ತಮಿಳು ಚಿತ್ರ "ಲೋಕ ಸುಂದರಿ ಪ್ರತಾಪಂ"ಗೆ ಹೋಗು

ವುದೋ ಯಾವುದು ? ಯಾವುದು ? ಎಲ್ಲವೂ ಒಂದಕ್ಕಿಂತ ಒಂದು ಕ್ರಾಂತಿಕಾರಿ ಐಟಮುಗಳೇ ! ತಾತ್ಯಾಟೋಪಿಯ ಕುದುರೆ ಕೊಟ್ಟ ಒದೆಯ ನೋವೋ ಅಥವಾ ಅವನ ಕಡೆಯುವರ ಮೂದಲಿಕೆಯ ನೋವೋ ಇನ್ನೂ ಹೋಗಿರಲಿಲ್ಲವಾದ್ದರಿಂದ ನನ್ನ ಅಭಿಪ್ರಾಯ ಕೊಡಲು ಅರ್ಧ ತಾಸು ಬೇಕಾಯಿತು. ಕೊನೆಗೆ ನಾನು ಹೋಗಿದ್ದು ಒಂದು ನಾಟಕಕ್ಕೆ. ಆ ನಾಟಕವೂ ಕ್ರಾಂತಿಯ ಕುರಿತು. ಅದರಲ್ಲಿದ್ದ ಬುಷ್‌ಕೋಟ್ ಹಾಕಿದ ತಾತ್ಯಾಟೋಪಿ ರಾತ್ರಿ ಮಲಗಿದಮೇಲೆ ಕೊಟ್ಟ ಪೀಡೆ ತ್ರೊ....ತ್ರೊ....ತೊ ....ಹೇಳಿ ಫಲವಿಲ್ಲ.

"ಆ ಮುದುಕ ಇದ್ದಿದ್ದರೆ ಶತಮಾನೋತ್ಸವ ಹೇಗೆ ಆಚರಿಸಬೇಕು, ಕ್ರಾಂತಿ ಎಂದರೆ ಏನು ಅಂತ ಹೇಳ್ತಾ ಇದ್ದ ನಿಮಗೆ. ಹೀಗೆ ಹುಚ್ಚುಹುಚ್ಚಾಗಿ ಮೆರೆಯೋದಕ್ಕೆ ಬಿಡ್ತಾ ಇರಲಿಲ್ಲ" ಎಂದು ಹೇಳಿಬಿಟ್ಟು ಧಾವಿಸಿಬಿಟ್ಟ ಟೋಪಿ ಮನುಷ್ಯ. ಅವನ ಕುದುರೆ ಪುನಃ ಎಲ್ಲಿ ಒದೆಯುತ್ತೋ ಎಂದು ಕಣ್ಣುಮುಚ್ಚಿ ಚೀರಿದೆ ನಾನು. ಆಗ ಎಚ್ಚರಗೊಂಡವನು ಮತ್ತೆ ಮಲಗಲಿಲ್ಲ. ಅಬ್ಬಾ, ನೆಮ್ಮದಿಯಿಲ್ಲ; ನಿದ್ರೆಯಿಲ್ಲ! ಕ್ರಾಂತಿ ಕ್ರಾಂತಿಯೇ!!

— ರಾಮಿ.



ತಾಂತ್ಯಾ ಚಟ್ನಿ—ಝಾನ್ಸಿ ಇಡ್ಲಿ ಸಾರ್—ಬಲು ಗರಮಾಗರಂ.

ಅವಳ ಮೂಗು

ನಗುವು ಬರುತ್ತಿದೆ, ಎನಗೆ,
ನಗುವು ಬರುತ್ತಿದೆ.
ಅವಳ ಮೂಗು ನೆನೆದಾಗೆಲ್ಲ
ನಗುವು ಬರುತಿದೆ.

ಗಿಣಿಯ ಮೂಗು, ಫಣಿಯ ಮೂಗು,
ಸೊಟ್ಟಮೂಗು, ಪಟ್ಟೆಮೂಗು,
ಸಪ್ಪೆಮೂಗು, ತೊಪ್ಪೆಮೂಗು,
ದುಂಡು ಮೂಗು, ಗಂಟು ಮೂಗು
ನೂರು ತರಹ ಚೂರುಪಾರು
ನೋಡಿರುವೆ, ನಗದೆ, ನಾನು!

ಆದರೇಕೊ, ಅವಳ ಮೂಗು!
ಅದನು ನೋಡೆ, ಬೇಡ, ನೆನೆಯೆ,
ನಗುವು ಬರುತಿದೆ, ಎನಗೆ
ನಗುವು ಬರುತಿದೆ.


ಅವಳ ಪಾದ ಅವಳ ನಡುವ
ಅವಳ ಕಂಠ ಅವಳ ಗಲ್ಲ
ತುಟಿಗಳೆರಡ ಹಲ್ಲ ಸಾಲ
ನೋಡಬಹುದು, ನಗದೆ ನಾವು

ಆದರವಳ ಮೂಗು ಮಾತ್ರ....
ಅದನು ನೋಡೆ, ಬೇಡ, ನೆನೆಯೆ,
ನಗುವು ಬರುತಿದೆ... ಎನಗೆ
ನಗುವು ಬರುತಿದೆ.

ಯಾವ ಮುದಿಯ ಶಾತ ಕೊಟ್ಟ
ಆ ಮೂಗನವಳಿಗೆ ?
ಯಾವ ಸೊಟ್ಟ ಗರುಡದೇವ
ವರವ ನಿತ್ತನೋ ?
ಯಾವ ಶಾಪ, ಯಾವ ಪಾಶ,
ಹೀಗೆ ಮಾಡಿತೊ
ಎಲ್ಲೊ ನೋಡುತೆಲ್ಲೊ ಬಾಗಿ
ತಿರುಗಿ ಕುಳಿತಿದೆ

ಹಾಳು ಮೂಗ ನೆನೆದರೆನಗೆ
ನಗುವು ಬರುತಿದೆ.

—ರುದ್ರಮ್ಮ.



"ರಂಗವಿಲಾಸ್" ಸುದ್ದಿ ಕಣೋ—ಹಿಂದಿನ ಪೇಪರಿನಲ್ಲಿದ್ದದ್ದನ್ನೇ—
ಅಚ್ಚೊತ್ತಿದರೆ ಸಾಕೋ—

ಜನಾರ್ದನ ಸೇವೆ

ಈಗಲೀಗ, ಭಾಷಣಕಾರರು ಸಿಗುವುದು ಸುಲಭವಾಗಿಹೋಗಿದೆ. ವಿಷಯದ ಹಂಗಿಲ್ಲ, ಮುಗಿಸಬೇಕು ಎಂಬ ಮಿತಿ ಇಲ್ಲ, ಸಭ್ಯವಾಗಿರಬೇಕೆಂಬ ಸಂಕಟವಿಲ್ಲ, ಹಾಗಂದ್ರೆ ಹಾಗೆ, ಬ್ರೇಕಿಲ್ಲದ ನಾಲಗೆ, ಎಂಬಂತೆ, ಯಾರು ಬೇಕಾದರೂ ಭಾಷಣ ಮಾಡಬಹುದು ಎಂದು ಜನತೆ ಒಪ್ಪಿರುವುದರಿಂದ, ಭಾಷಣಕಾರರು ಬಹುಬೇಗ ಸಿಕ್ಕಿಬಿಡುತ್ತಾರೆ.

ಆದರೆ, ಅವರ ಅಕ್ಕ, ಪಕ್ಕ, ಎಡ, ಬಲ, ಹಿಂದೆ, ಹೀಗೆ ವೇದಿಕೆಯ ಮೇಲೆ ಕೂತು ಕುರ್ಚಿಗಳನ್ನು ಅಲಂಕರಿಸಬಲ್ಲ ವ್ಯಕ್ತಿಗಳು ಸಿಗುವುದೇ ಅಪರೂಪವಾಗಿ ಬಿಟ್ಟಿದೆ. ಈ ಮಾತನ್ನು ಎಲ್ಲ ಕಾರ್ಯದರ್ಶಿಗಳೂ ಒಪ್ಪುವರು. ಭಾಷಣಕಾರರ ಪ್ರತಿಷ್ಠೆಯನ್ನು ಹೆಚ್ಚಿಸಲು, ಅವರ ಸ್ನೇಹಿತರಂತೆ ನಟಿಸಬಲ್ಲ, ಹತ್ತಿಪ್ಪತ್ತು ಮಹನೀಯರಾದರೂ ವೇದಿಕೆಯ ಮೇಲೆ ಕುಳ್ಳಿರಬೇಡವೆ? ಸಭಾಮಂದಿರದವರೆಲ್ಲರೂ ಎದ್ದು ಹೋದ ಮೇಲೆ, ಭಾಷಣ ಕೇಳಲು ಆ ಮಹನೀಯರಾದರೂ ಉಳಿದಿರ ಬೇಡವೆ? ಅಂತಹ ಅಲಂಕಾರದ ಪಶುಗಳು ಸಿಗುವುದೆಲ್ಲಿಂದ; ಎಂಬುದೇ ಕಾರ್ಯ ದರ್ಶಿಗಳ ತಾಪತ್ರಯ.

ಹಿಂದೆಲ್ಲ, ಈ ವೇದಿಕಾಮಹನೀಯರು ಆಕರ್ಷಣೀಯವಾಗಿ, ಉಡಿಗೆ ತೊಡಿಗೆ ಗಳನ್ನು ಧರಿಸಿರಬೇಕು, ಎಂಬ ಅಭಿಪ್ರಾಯವಿತ್ತು. ಷರಾಯಿ ಧಾರಿಗಳಾಗಿದ್ದರೆ, ಇಸ್ತ್ರಿಯ ಗೆರೆ ಮಾಸಿರಬೇಕು. ಧೋತ್ರ ಕಟ್ಟಿದ್ದರೆ, ಮಡಿ ಕೆಡದಿರಬೇಕು, ಹಲವರು ತಾಂಬೂಲ ಚರ್ವಿಸಿ ತುಟಿ ಕೆಂಪಗೆ ಮಾಡಿಕೊಂಡಿರಬೇಕು. ಹಲವರು ಸಿಗರೇಟಿ ಗಾಗಿ ಕಿಸಿಯೊಳಕ್ಕೆ ಕೈ ತುರುಕುತ್ತಿರಬೇಕು, ಕ್ಷೌರಿಕನ ಕೈವಾಡ ಎಲ್ಲರ ಮುಖದಲ್ಲೂ ರಾರಾಜಿಸುತ್ತಿರಬೇಕು, ಎಂದೆಲ್ಲ ೧೯೪೭ರ ಹಿಂದೆ ನಾವು ನಿರೀಕ್ಷಿಸುತ್ತಿದ್ದೆವು.

ಆದರೆ, ಈಚೆಗೆ ೧೦ ವರ್ಷಗಳಿಂದ, ಈ ಅಭಿಪ್ರಾಯ ಮಾಯವಾಗಿದೆ. ಭಾಷಣಕಾರ ಮಹನೀಯರು, ದೀನದಲಿತ ಸೇವಕರು, ಗ್ರಾಮೋದ್ಧಾರಕರು, ಶ್ರಮ ದಾನ ಪ್ರವೀಣರು ಎಂಬುದನ್ನು ಅವರೇನೋ ಒರಟುಮಾತನ್ನ ಅನಾಗರಿಕವಾಗಿ ಮಾತಾಡುವರು, ನಿಜ! ಆದರೆ, ವೇದಿಕಾ ಪೀಠಸ್ಥರೂ ಕೂಡ, ಕೊಳೆ ಬಟ್ಟೆ, ಹಳೇ ಟೋಪಿ, ವಾರದ ಗಡ್ಡ, ಗುಂಡಿಯಿಲ್ಲದ ಜುಬ್ಬ, ಹರಿದ ಕಾಲುಕುಪ್ಪಸ, ಧರಿಸಿ, ಬಡವಾತಾವರಣಕ್ಕೆ ಕಳೆ ಕೂಡಿಸಬೇಕು.

ಅಂಥವರನ್ನು ಹಿಡಿದು ತಂದು, ವೇದಿಕೆಯ ಮೇಲೆ ಕೂರಿಸುವ ಮೊದಲು, ಅಲ್ಲಿ ಅವರು ಭಾಷಣಕಾಲದಲ್ಲಿ ಹೇಗೆ ವರ್ತಿಸಬೇಕೆಂಬುದನ್ನೂ ಅವರಿಗೆ ತಿಳಿಸಬೇಕು, ಕಾರ್ಯದರ್ಶಿಗಳು! ವೇದಿಕೆಯ ಮೇಲೆ ಮುಂದಿನ ಸಾಲಲ್ಲಿ ಕೂರುವ ಅಲಂಕಾರ

ಪುರುಷ, ಎಡಗಾಲನ್ನೆತ್ತಿ ಬಲಗಾಲ ಮಂಡಿಯ ಮೇಲೂ, ಬಲಗಾಲನ್ನೆತ್ತಿ ಎಡಗಾಲ ಮಂಡಿಯ ಮೇಲೂ ಇಡುತ್ತಾ ಇದ್ದರೆ, ಸಭಿಕರ ದೃಷ್ಟಿ ಎಲ್ಲ ಆತನ ಕಡೆಗೇ ಹರಿಯುವುದರಿಂದ, ಹಾಗೆ ಮಾಡುವ ಚಟ ಇರುವವರೊಬ್ಬರನ್ನೂ, ವೇದಿಕೆಯ ಮೇಲೆ ಕೂರಿಸದಿರುವುದೇ ಮೇಲು. ಅಥವಾ, ಹಾಗೆ ಕಾಲು ಬದಲಾಯಿಸಬೇಕಾಗಿ ಬಂದಾಗ (ಹತ್ತು ನಿಮಿಷಕ್ಕೊಂದು ಸಲ ಹಾಗೆ ಮಾಡಲೇಬೇಕಾಗಿ ಬರುತ್ತೆ. ಅನ್ನಿ), ಅವರು ಸಮಯ ಕಾಯಬೇಕು........ಅಂದ್ರೆ, ಭಾಷಣಕಾರರು ನೀರು ಕುಡಿಯುವಾಗಲೋ, ಹಳೆಯ ಒಂದು ಹಾಸ್ಯದ ಕಥೆಯನ್ನು ಮರೆತು ಅದನ್ನು ನೆನೆಸಿಕೊಳ್ಳುತ್ತಾ ಹೆಕ್ಕತ್ತು ಕೆರೆಯುತ್ತಿರುವಾಗಲೋ, ಅವರು ಕಾಲು ಬದಲಾಯಿಸುವುದು ಸೂಕ್ತ.

ಅಲ್ಲದೆ, ಮೀಸೆಯನ್ನೆಳೆದು ಬಾಯೊಳಕ್ಕೆ ತುರುಕಿ ಅದನ್ನು ಜಗಿಯುವವರು ಕೆಲವರಿರುತ್ತಾರೆ. ಅವರನ್ನ ವೇದಿಕೆಯ ಮೇಲೆ ಕೂರಿಸಿದರೆ, ಸಭಿಕರು ಗಂಭೀರವಾಗಿ ಕೂರುವುದೇ ಇಲ್ಲ. ಕುರ್ಚಿಯನ್ನು ಹಿಂಗಾಲಲ್ಲೇ ನಿಲ್ಲಿಸಿ ಅತ್ತಿತ್ತ ತೂಗುವವರು, ಬೂಟ್ಸಿನ ಕಾಲನ್ನ ಬಡ ಬಡ ನೆಲಕ್ಕೆ ಬಡಿದು ಗದ್ದಲ ಎಬ್ಬಿಸುವವರು, ನಶ್ಯವನ್ನು ಬ್ರಹ್ಮರಂಧ್ರಕ್ಕೆ ತುಂಬುವ ರಭಸ ಪ್ರಿಯರು, ಇವರನ್ನೂ ವೇದಿಕೆಯ ಮೇಲೆ ಕರೆತರಲೇಬಾರದು.

ಆ ಮೇಲೆ, ಮರೆತೆನಲ್ಲಾ! ಕೆಲವರು ಇದಾರೆ, ಮಂಕರು! ಭಾಷಣಕಾರರು ಹಾಸ್ಯದ ಚಟಾಕಿಯನ್ನು ಹಾರಿಸಿದರೆ, ಉಳಿದವರೆಲ್ಲ ನಕ್ಕು ನಾಲ್ಕು ನಿಮಿಷವಾದ ಮೇಲೆಯೇ, ಅವರಿಗೆ ಅದರ ಅರ್ಥ ಹೊಳೆಯುವುದು.... ನಿಧಾನ ಮೆದುಳು, ಅವರದು. ನಗುವುದು, ಕೈ ಚಪ್ಪಾಳೆ ತಟ್ಟುವುದು, ಶೀನುವುದು, ಆಕಳಿಸುವುದು ಇತ್ಯಾದಿ ಚೇಷ್ಟೆಗಳನ್ನು ಎಲ್ಲರೂ ಒಟ್ಟಾಗಿ ಮಾಡಿದರೆ, ಸೊಗಸು. ಅದು ಬಿಟ್ಟು, ನಾವು ವೇದಿಕೆಯ ಮೇಲೆ ಕೂರಿಸಿ ಬಹುಮಾನಿಸಿದ ಮಹಾಪ್ರಾಣಿ, ಗುಂಪಿನಲ್ಲಿ ಗೋವಿಂದ ಎನ್ನದೆ, ಗುಂಪು ಚದುರಿದ ನಂತರ, ಯಾವಾಗಲೋ, ನಕ್ಕರೆ, ಎಲ್ಲರೂ ಅವರನ್ನೇ ದುರುದುರು ನೋಡುತ್ತ ಶಪಿಸುತ್ತಿರುತ್ತಾರೆ


ಭಾಷಣಗಳನ್ನು ಏರ್ಪಡಿಸಿ, ಭಾಷಣಗಾರರನ್ನು ಬುಟ್ಟಿಗೆ ಹಾಕಿಕೊಂಡು ಭುಜ ತಟ್ಟಿಸಿಕೊಳ್ಳುವವರು, ಆ ಭಾಷಣಗಳ ಸುರಿಮಳೆಯ ಮೋಡಗಳು ಓಡಾಡುವ ವೇದಿಕಾಕಾಶದಲ್ಲಿ, ಅಲಂಕಾರಕ್ಕಾಗಿ ಹಲವು ನಕ್ಷತ್ರಗಳನ್ನೂ ಜೋಡಿಸಬೇಕು. ಆ ನಕ್ಷತ್ರಗಳು ತೊಳಗಬೇಕು, ಅಷ್ಟೆ! ಮರ್ಯಾದೆ ಮೀರದೆ, ಕಾವಿಲ್ಲದ ಬೆಳಕನ್ನು ಚೆಲ್ಲಬೇಕು. ಇದೂ ಒಂದು ಅತಿಮುಖ್ಯ ಜನಸೇವೆ. ಅಂದರೆ, ಜನಾರ್ದನ ಸೇವೆ.

—ಪುರುಷೋತ್ತಮ.

ಕೋಕಿಲವಾಣಿ

ನಾನು—ಆಷಾಢಮಾಸ ಮಳೆ ಜೋರೆಂದು ಜಿಟುಕುತಿರೆ
ಶ್ಲೇಷ್ಮ ಹಿಡಿದಿದೆ ಕೆಮ್ಮು ಖೊಕ್ಕೆನುತಿದೆ
ಏರಿಹುದು ಭಾರತಕೆ ನೂರೈದು ಡಿಗ್ರಿ ಜ್ವರ
ಭಾರಿ ಫ್ಲೂ ದಂಗೆ ಕೇಳಲೆ ಕೋಗಿಲೆ
ನೀನೇಕೆ ವಿರಹವನು ಪಂಚಮದಿ ಪಾಡುತಿಹೆ
ಜ್ಞಾನವಿಲ್ಲವೆ ಬುದ್ಧಿ ಶೂನ್ಯವಾಯ್ತೇ.

ಕೋಗಿಲೆ—ಅರಿತಿರುವೆನೆಲೆಮಿತ್ರ ಫ್ಲೂ ಬಡಿದು ಇಲಿ ನೀನು
ತೆರಿಗೆಗಳ ತೆರೆಹೊತ್ತು ಕತ್ತೆ ನೀನು
ನೆರೆ ವಿಶ್ವಶಾಂತಿಯನು ಧ್ಯಾನಿಸುವ ಕುರಿ ನೀನು
ಬರಿ ಬೂದಿಯಲಿ ಹೊರಳಿ ನಾಯಿ ನೀನು
ನೂರು ವರ್ಷದ ಹಿಂದೆ ಭಾರಿದಂಗೆಯೆನೆಡೆದು
ನೂರಾರು ಜನ ಸತ್ತು ಸೂರೆಯಾಯ್ತೂರು
ನಿನಗಾಗಿ ಆ ದಂಗೆ ನೀನಿಂದು ಅಹಹಿಂಗೆ
ಅದಕಂಡು ನಗುನಂಗೆ ವಿರಹವಲ್ಲ.



ಈ ಸರ್ತಿ ಅಖಿಲ ಕರ್ಣಾಟಕ ಮಕ್ಕಳ ಸ್ಪರ್ಧೆಗಳಲ್ಲಿ ಎಂ. ಎಲ್. ಎ. ಅವರ
ಮಕ್ಕಳಿಗೇ ಬಹುಮಾನ ಬಂತಲ್ಲೇ!!

ಅಕವಿ ಪ್ರೇಮ

(ಅಧ್ಯಕ್ಷ ಸಂತಾಪ)

ಕಂದರ್ಪೋಽಪಿಯಮಾಯತೇ ವಿರಚಯನ್ ಶಾರ್ದೂಲವಿಕ್ರೀಡಿತಂ—ಜಯದೇವ.

ವಸಂತ ಇನ್ನಿಲ್ಲ. ವರ್ಷರ್ತು ಧಾಂಧೂಂ ಮಾಡುತ್ತಿದೆ. ವಿಜಯ ಕೆಫೆಯ ಮೂರನೇ ಮಹಡಿ ತುಂಬಾ ತುಂಬಿದೆ. ಕರ್ಣಾಟಕ ಏಕೀಕರಣಾನಂತರ ಇದು ಪ್ರಥಮ ಪುನರ್ಮಿಲನ—ಅಖಿಳ ಕರ್ಣಾಟಕ ವಿಫಲ ಪ್ರೇಮಿ ಜನ ಪರಿಷತ್ತಿಗೆ. ಹಾಗೆಯೇ ಬಡ್ಜೆಟ್ ಚರ್ಚೆಯೂ ನಡೆಯುತ್ತದೆ ಈ ಅಧಿವೇಶನದಲ್ಲಿ.

ವಿದೇಶೀ ವಿನಿಮಯ ಪರಿಸ್ಥಿತಿಯ ಉದ್ಧಾರಕ್ಕೋಸುಗವಾಗಿ ಅಕವಿಪ್ರೇಮವು ಭಾರತ ಸರ್ಕಾರದ ಸಹಾಯವನ್ನು ಕೇಳಲಿಲ್ಲ. ವಿಫಲಪ್ರೇಮ ಪರಿಸ್ಥಿತಿಯನ್ನು ಇರುವ ಮಟ್ಟದಲ್ಲೇ ಇಡಲು ಸದಸ್ಯರಿಗೆ ಸಂಸ್ಥೆಯು ಧನಸಹಾಯ ಮಾಡಲೇಬೇಕೆಂಬ ಒತ್ತಾಯ ಎಲ್ಲರಿಂದಲೂ ಬರುತ್ತಿದೆ. ಸಭಾರಂಭ ಸಮಯದಲ್ಲಿ ಮೂರ್ಛೆಹೋದ ಖಜಾಂಚಿ ಇನ್ನೂ ಎಚ್ಚೆತ್ತಿಲ್ಲ. ಯಾರ ತಲೆಗಳೂ ಓಡುತ್ತಿಲ್ಲ. ವಿಲಪತಿ, ಹಸತಿ, ವಿಷೀದತಿ, ರೋದತಿ, ಎಂಬಂತಿದೆ ವಾತಾವರಣ. ಮೇಘೋದಯದೊಂದಿಗೆ ವಿರಹ ತಾಪ ಹೆಚ್ಚಾಗಿದೆ.

ಬಡ್ಜೆಟ್ ಬಿಕ್ಕಟ್ಟನ್ನು ಬಿಡಿಸಿದ ಶ್ರೇಯಸ್ಸು ನಮ್ಮೂರಿನ ಫ್ರೇಮರ್ ದಾಮೋದರ ರಾಯನಿಗೆ ದೊರಕಿತು. ದಾಮೋದರ, ಸಿನಿಮಾ ಪ್ರೇಮಿ. ಅವನು ನೋಡಿದ ಹಿಂದಿನ ಹತ್ತು ಚಿತ್ರಗಳ ನಾಯಕಿಯರಲ್ಲೂ ಅವನ ಪ್ರೇಮ ಉದ್ಭವಿಸಿ ವಿಫಲವಾಯ್ತು. ಆ ಹತ್ತು ತಾರೆಯರ ಪಂಚರಂಗೀ ಚಿತ್ರಗಳಿಗೂ ಒಂದೇ ಫ್ರೇಮನ್ನು ತೊಡಿಸಿ, ಆ ಪಟವನ್ನು ಹಿಡಿದು ಕಣ್ಣೀರು ಸುರಿಸುತ್ತಾ ಅವನು ಸಭಾಮಂದಿರಕ್ಕೆ ಬಂದೊಡನೆ ಕಾರ್ಯದರ್ಶಿಗಳು ಎದ್ದರು.

"ದೋಸ್ತಿಗಳೇ ಇಂದೀಗ ಶ್ರಾವಣ ಶನಿವಾರ. ಈ ಕಟ್ಟನ್ನು ಹಿಡಿದು ಭಜನೆ ಮಾಡುತ್ತಾ ಹೊರಡುವಾ! ಬಂದ ಹಣವನ್ನು ಬಡ್ಜೆಟ್ಟಿಗಾಗಿ ವಿನಿಯೋಗಿಸುವಾ!" ಎಂದರು.

"ದಾಮೋದರ್ ಕೀ ಜೈ" ಎಂಬ ಜಯಕಾರದಲ್ಲಿ ದಾಮೋದರನ ಹಿಂದಿನ ಶಬ್ದ 'ದಡ್ಡ' ಯಾರ ಕಿವಿಗೂ ಬೀಳಲಿಲ್ಲ.

ಅನುಭವ ಕಥನ ಆರಂಭವಾಯಿತು. ಕಾಲೇಜಿನ ಹುಡಿ ಚಿಲ್ರೆಯೊಂದು ಹೇಳಿದ ಕತೆಯನ್ನು 'ಅದೇ ಮಾಮೂಲಿ!' ಎಂಬ ತಿರಸ್ಕಾರ ವಾಕ್ಯದಿಂದ ಸದಸ್ಯರು

ಸ್ವಾಗತಿಸಿದರು. ಪುಡಿ ಚಿಲ್ರೆ, ಕನಲಿ ಕಲ್ಪಾಂತ ಭೈರವನಾದ. "ಮಾಮೂಲಿ ಯಲ್ಲದ ಕತೆಯನ್ನು ಈ ಆಗಸ್ಟ್ ಅಸೆಂಬ್ಲಿಯಲ್ಲಿರುವ ಅಮಾನ್ಯ ಸದಸ್ಯರು ಬೊಗಳಲಿ" ಎಂದು ಛಾಲೆಂಜಿದ. ಮಾತೇನೋ ಅಗೌರವಕರವಾದುದು. ಆದರೆ ಸತ್ಯವೂ ಹೌದು. ಇಷ್ಟು ದಿನಕ್ಕಾಗಲೇ ಎಲ್ಲರ ಅನುಭವವೂ ಮಾಮೂಲಿಯಂತೆ ತೋರುತ್ತಿದೆ.

ಅಧ್ಯಕ್ಷರು ಸಂತಪ್ತರಾದರು. ಕಾರ್ಯದರ್ಶಿಗಳನ್ನು ಕರೆದರು. "ಏನಯ್ಯ ಈ ಛಾಲೆಂಜನ್ನು ತೆಗೆದುಕೊಳ್ಳುವ ಶೂರ ಇಲ್ಲಾರೂ ಇಲ್ಲವೇ ?" ಎಂದರು.

ಕಾರ್ಯದರ್ಶಿ ಬೇಜಾರು ಪಟ್ಟುಕೊಂಡ. "ಸ್ವಾಮಿ, ನೀವು ಇದುವರೆಗೂ ಕಂಡವರ ಪ್ರೇಮ ಭಂಗಗಳನ್ನು ಕೇಳುವುದರಲ್ಲೇ ಕಾಲ ತಳ್ಳುತ್ತಿದೀರಿ. ಛಾಲೆಂಜನ್ನು ಇನ್ನಾರಾದರೂ ಏಕೆ ತೆಗೆದುಕೊಳ್ಳಬೇಕು ? ಸಭಾ ಮರ್ಯಾದೆಯನ್ನು ಉಳಿಸುವ ವರು ಯಾರಾದರೂ ಇರಬೇಕೆಂದರೆ ಅವರು ನೀವಾಗಿರಬೇಕು ಸಭೆಯ ಅಧ್ಯಕ್ಷ ರಾಗಿರಲು ನಿಮಗೆ ಯಾವ ಅರ್ಹತೆಯುಂಟೋ ಯಾರೊಬ್ಬರೂ ಅರಿಯರು. ನೀವೇ ಛಾಲೆಂಜ್ ತೆಗೆದುಕೊಳ್ಳಿ" ಎಂದು ನಿರ್ಭಿಡೆಯಿಂದ ಹೇಳಿಬಿಟ್ಟ.

ಅಧ್ಯಕ್ಷರು ಅರೆ ಬೆದರಿಕೆಯ ಮುಖಭಾವದೊಂದಿಗೆ ಎದ್ದು ನಿಂತರು. "ಮಾನ್ಯ ಸದಸ್ಯರೇ, ನನ್ನ ಅನುಭವ ಕಥನವೂ ಮಾಮೂಲಿ ದರ್ಜೆಯದೇ ಇರಬಹುದು. ಆದರೂ ಹೃದಯ ವಿದ್ರಾವಕವಾಗಿದೆಯೆಂದು ಧಾರಾಳವಾಗಿ ಹೇಳಬಲ್ಲೆ. ನನ್ನ ಮಟ್ಟಿಗೆ ಹೇಳುವುದಾದರೆ ನನ್ನ ಹೃದಯವೇ ಇಲ್ಲದಂತಾಗಿದೆ. ಸಹಾನುಭೂತಿ ಯಿಂದ ಕೇಳಿರಿ.

ಹೇವಿಳಂಬಿಯ ವಸಂತಾಂತ್ಯ. ಥಿಯೇಟರ್ ಜಿಬ್ರಾಲ್ಟರಿನಲ್ಲಿ "ಮಣಮಗನ್ ಮಹಾಚರಿತ್ತಿರ ಚ್ಚಿಕ್ಕುರಂ" ನಡೆಯುತ್ತಿತ್ತು. ಈ ಅದ್ಭುತ ಧಾಡಸೀ ಜಂಗೀ ಚಿತ್ರ ವನ್ನು ನೋಡಲೇಬೇಕೆಂದು ಜಾಹಿರಾತು ಒತ್ತಾಯಪಡಿಸಿದುದರಿಂದ ಹೋಗಲೇ ಬೇಕಾಯ್ತು. ತಮಿಳರ ಆಟವಾದುದರಿಂದ ಒಂದು ಗಂಟೆ ತಡೆದು ಹೋದರೆ ನಷ್ಟ ವಿಲ್ಲವೆಂದು, ತಡೆದೇ ಹೋದೆ. ಥೇಟರಿನೊಳಕ್ಕೆ ಹೋದಾಗ ನಾಯಕನ ಮುತ್ತಜ್ಜನ ಹೆಣದ ಮುಂದೆ ನಾಯಕನ ಅಜ್ಜ ಬಡಿದುಕೊಳ್ಳುತ್ತಿದ್ದ. ಸ್ವಲ್ಪ ಹೊತ್ತಿನ ಮೇಲೆ ಹಾಡಿಗೆ ಆರಂಭವಾದುದರಿಂದ, ಒಂದು ಚಿಕ್ಕ ವಾಕಿಂಕ್ ಹೋಗಬಾರದೇಕೆ ಎನ್ನಿ ಸಿತು. ಪಾಸ್ ತೆಗೆದುಕೊಂಡು ಹೊರಟೆ. ಸಿಗರೇಟು ಕೊಂಡು, ಸೇದುತ್ತಾ ಸುಮಾರು ಕಾಲು ಫರ್ಲಾಂಗ್ ಮುಂದಕ್ಕೆ ಹೋದೆ. ಆಗ ನನ್ನ ಹೃದಯವೇ ಇಲ್ಲದಿರುವ ವಿಷಯ ಪತ್ತೆಯಾಯ್ತು. ಸಿಗರೇಟು ಅಂಗಡಿಯಲ್ಲೇ ಕಳೆದು ಹೋಗಿ ದ್ದೀತೇ ಎಂದುಕೊಂಡು ಹಿಂತಿರುಗಿ ಹೋದೆ. ಅದರೆದುರಿಗೆ ನಿಂತ ತರುಣಿಯೊಬ್ಬಳು ನಾನು ಹೋಗುವಷ್ಟರಲ್ಲಿ ಒಂದು 'ಚಂದಮಾಮ' ಕೊಂಡುಕೊಂಡು ಹೊರಟಳು.

ನನ್ನ ಹೃದಯ ಅವಳಲ್ಲೇ ಉಳಿದಿತ್ತು. ಅವಳನ್ನು ಹಿಂಬಾಲಿಸಿ ಹೊರಟೆ. ಎಷ್ಟೋ ಹೊತ್ತಿನ ನಂತರ ಅವಳು ಮನೆಯೊಂದರ ಒಳಕ್ಕೆ ಹೋದಳು. ಆ ಮಹಡಿ ಮನೆಯ ಚಕ್ಕುಬಂದಿಯನ್ನು ಚೆನ್ನಾಗಿ ಗಮನಿಸಿದೆ. ನಂತರ ಥೇಟರಿಗೆ ಹೋದೆ.

ಗೇಟ್ ಕೀಪರು ನನ್ನ ಪಾಸನ್ನು ಸ್ವೀಕರಿಸುತ್ತಾ "ಆಗಲೇ ನಾಯಕ ಹುಟ್ಟಿ ಹತ್ತು ನಿಮಿಷ ಆಯ್ತು ಸಾರ್" ಎಂದ.

"ತಮಿಳು ಡೈರೆಕ್ಟರುಗಳು ಒಮ್ಮೊಮ್ಮೆ ಕತೆಯನ್ನು ಶೀಘ್ರವಾಗಿ ಬೆಳೆಸುತ್ತಾರಯ್ಯಾ" ಎಂದೆ.

ಒಳಗೆ ಕುಳಿತೆ. ನಾಯಕನ ನಾಮಕರಣಕ್ಕೆ ಸಂಭ್ರಮದ ಸಿದ್ಧತೆಗಳು ನಡೆದಿದ್ದವು. ಇಪ್ಪತ್ತು ಮೂವತ್ತು ರಮಣಿಯರು ತಟ್ಟೆಗಳನ್ನು ಹಿಡಿದು ಚಲ್ಲಾಟ ನಡೆಸಿದರು. ನಂತರ ಕೆಲ ಕಾಲದ ಮೇಲೆ ಜೋಗುಳ ಆರಂಭವಾಯ್ತು. ನಾನು ಎದ್ದು ನೆಟ್ಟನೆ ನಮ್ಮ ಜೋಯಿಸರ ಮನೆಗೆ ಹೋದೆ. ಅವರು ಜ್ಯೋತಿಷ ಭಾಸ್ಕರ, ರಮಲ ಬ್ರಹ್ಮ. ನನ್ನನ್ನು ನೋಡಿದೊಡನೆ "ಎಲೈ ಬೆಸಗೊಂಬಾತನೆ, ನೀನು ಪ್ರೇಮ ಪಾಶದಲ್ಲಿ ಸಿಲುಕಿರುವೆ" ಎಂದರು. ನಂತರ "ನಿನ್ನ ಪ್ರೇಯಸಿ ಗುಲಾಬಿ ಬಣ್ಣದ ಕೆನ್ನೆಯವಳು, ಮೆರೂನ್ ಕಲರ್ ಸೀರೆ ಧರಿಸುತ್ತಾಳೆ. ಸಿಲ್ಕ್ ರವಕೆ, ಎರಡು ಜಡೆ, ಐದೂವರೆ ಅಡಿ ಎತ್ತರ. ಜಗನ್ಮೋಹಿನಿ most beautiful girl in the world" ಎಂದರು. ಸತ್ಯಸ್ಯ ಸತ್ಯ ಕಥನಂ—ರಾಮಾಯಣ ಸಂದರ್ಶನದಂತೆ. ಜಾತಕ ತೆಗೆದರು. 24 ಗುಣ ಕೂಡಿಬರುತ್ತದೆ ಎಂದರು. ಆದರೆ ನನಗೆ ಚಂದ್ರಾತ್ ಕುಜದೋಷವುಂಟು; ಆ ಮಹಡಿ ಮನೆಯ ಹುಡುಗಿಗೆ ಇಲ್ಲ; ಇದೊಂದು ದೊಡ್ಡ ಅಡ್ಡಿ ಎಂದರವರು ಆದರೆ ಪ್ರೇಮ ಅಪ್ರತಿಹತವಾದುದು; ಅದರ ಶಕ್ತಿಯ ಮುಂದೆ ನಿಲ್ಲಬಲ್ಲ ಶಕ್ತಿ ಇನ್ನೊಂದಿಲ್ಲ ಆ ವಿಶ್ವವಿಜಯಿ ಪ್ರೇಮ ನಿನ್ನನ್ನು ಕಡೆಹಾಯಿಸುತ್ತದೆ ಎಂದು ಆಶ್ವಾಸನ ನೀಡಿ ನನ್ನಿಂದ ಎರಡು ರೂಪಾಯಿ ಕಿತ್ತುಕೊಂಡರು.

"ಜೋಯ್ಸರೇ ಇಷ್ಟುಹೊತ್ತಿಗೆ ನಾಯಕ ನಾಯಕಿಯರ ಪ್ರಥಮ ಸಂದರ್ಶನವಾಗಿದ್ದರೆ ನನ್ನ ಗತಿಯೇನು" ಎಂದು ಥೇಟರಿಗೆ ಓಡಿಹೋದೆ. ಡೈರೆಕ್ಟರ್ ನನ್ನ ಕೈಬಿಟ್ಟಿರಲಿಲ್ಲ. ನಾನು ಹೋದಾಗ ಬೆಂಡೆಕಾಯಿಯಂತೆ ಬಡಕಲಾದ ಚಿಲ್ಟೆ ಹುಡುಗಿಯೊಂದಕ್ಕೆ ಅವರಮ್ಮ ಮುಸುರೆ ತಿಕ್ಕುವ ಕಲೆಯನ್ನು ಹೇಳಿಕೊಡುತ್ತಿದ್ದಳು. ಮುಂದೆ ಐದು ನಿಮಿಷ ಕಾಲ ಆ ಬಡಕಲ ಕೈ ಮತ್ತು ಅದು ತಿಕ್ಕುತ್ತಿದ್ದ ಪಾತ್ರೆ ಇವೇ ತೆರೆಯ ಮೇಲೆ ಕಾಣುತ್ತಿದ್ದವು.

"ಇತ್ತೀಚೆಗೆ ದಕ್ಷಿಣ ಭಾರತೀಯ, ಅದರಲ್ಲೂ ತಮಿಳು, ದಿಗ್ದರ್ಶಕರ ವಿಧಾನಗಳು ಕ್ರಾಂತಿಕಾರಕವಾಗಿ ಪರಿವರ್ತನೆಗೊಂಡಿವೆ. ಅದಕ್ಕೆ ಸಾಕ್ಷೀಭೂತವಾಗಿ ಆ

ಚಿಕ್ಕ ಕೈ ಇದ್ದಕ್ಕಿದ್ದಂತೆ ಬಾತುಕೊಂಡಿತು. ಇಡೇನು ಎನ್ನುವಷ್ಟರಲ್ಲೇ....ಕ್ರೊಯ್ —ನಾಯಕಿ ಬೆಳೆದುಬಿಟ್ಟಿದಾಳೆ. ನಾಯಕ ಬಂದೇಬಿಟ್ಟ. ಪ್ರೇಮ ಉದ್ಭವಿಸಿಯೇ ಬಿಟ್ಟಿತು. ನೋಡಿ ಕಣ್ಣುಗಳಿಗೆ ಹಬ್ಬವೂ ಆಯ್ತು. ಫ್ಲ್ಯಾಶ್ ಬ್ಯಾಕ್—ಖಳ ನಾಯಕನ ತಾಯ್ತಂದೆಗಳ ಸಂಸಾರ ಜೀವನ.

"ಎದ್ದೆ. ನೇರವಾಗಿ ಪುಹಡಿ ಮನೆಗೆ ಹೋದೆ. ವರಾಂಡದಲ್ಲಿ ದೀಪ ಉರಿಯುತ್ತಿತ್ತು. ಅಲ್ಲಿ ನಿಂತಿದ್ದಳು ನನ್ನ ಭಾವರಾಣಿ. ನನ್ನ ಹೃದಯ ಚೋರಿ."

"ಯಾರಲ್ಲಿ? ಪ್ಲೀಸ್ ಕಮಿನ್" ಎಂದಳು. ನನ್ನ ಹೃದಯ ಅಲ್ಲ ರಕ್ತನಾಳಗಳು ಢಬಢಬನೆ ಬಡಿದುಕೊಂಡವು.

"ಪ್ಲೀಸ್, ಮಿಸ್ಟೇಕ್ ಮಾಡ್ಕೋಬೇಡಿ. ಮದುವೆಗೂ ಕುಜದೋಷಕ್ಕೂ ಏನು ಸಂಬಂಧ?" ಎಂದು ಕೇಳಿದೆ.

"ಏನೂ ಇಲ್ಲವಲ್ಲಾ?"

"ಸದ್ಯ! ನಂಗೆ ಬಹಳ ಸಂತೋಷ ಆಯ್ತು. ಮುಂದೆ......."

"ಡ್ಯಾಡಿ ಇಲ್ಲ ಮನೇಲಿ ಅವರು ಬಂದ್ಮೇಲೆ ಬನ್ನಿ."


"ನಿಜ ನಿಜ. ಇಷ್ಟು ಹೊತ್ತಿಗೆ ನಾಯಕನಿಗೂ ಖಳನಾಯಕನಿಗೂ ಕೈ ಕೈ ಮಿಲಾಯ್ಸಿರಬೇಕು. ಬರ್ತೀನಿ" ಎಂದು ಹೊರಟೆ. ಅವಳು "Jesu! Mary! shield me well" ಎಂದು ಪ್ರಾರ್ಥಿಸಿದುದು ಕೇಳಿತು. ಕೆಲಸ ಕೆಟ್ಟಿತು! ಮಾಡುವುದೇನು? ಥೇಟರಿಗೆ ಬಂದಾಗ ನಾಯಕ ಉಜ್ಜಬೆಕಿಸ್ಥಾನವನ್ನು ಸೇರಿದ್ದ.



ಉಜ್ಜೈಕಿ ನರ್ತಕಿಗೂ ಅವನಿಗೂ ಪ್ರೇಮ ಬೆಳೆಯುವುದಕ್ಕಾರಂಭವಾಯ್ತು. ಅವರಿಬ್ಬರ ವಿವಾಹವೂ ಆಯ್ತು. ಅಷ್ಟರಲ್ಲಿ ಖಳನಾಯಕ ನಾಯಕಿಯನ್ನು ಲಪಟಾಯಿಸಿಕೊಂಡು ಹೋಗಿ ಕಲ್ಲಿನ ಕೋಟೆಯ ನಡುವೆ ಮುಚ್ಚಿಟ್ಟ.

ನಾಯಕ ಬಂದ. ನಾಯಕಿ ಇಲ್ಲ ಇದು ಖಳನಾಯಕನ ಕುತಂತ್ರ ಎಂದವನಿಗೆ ತಿಳಿಯಿತು. 'ಪಾರ್ಕಲಾಂ' ಎಂದು ಘರ್ಜಿಸಿದ. ಖಳನಾಯಕನ ಕುತಂತ್ರದಿಂದ ನಾಯಕನ ಅರೆಸ್ಟ್ ಆಯ್ತು. ಕೋರ್ಟಿಗೆ ಹಾಜರ್ ಆದ.

ನಾಯಕ ವಾದವನ್ನಾರಂಭಿಸಿದ ಆಂ, ನಾಂಗಳ್, ನೀಂಗಳ್, ಇನ್ಬಂ, ಒರುನಾಳ್, ತಿರುಂಡಂ, ಇತ್ಯಾದಿ ಪದಗಳಿಂದ ನಾಯಕ ತನ್ನ ವಾದವನ್ನು ಸಮರ್ಥಿಸಿಕೊಂಡ. ನಂತರ ಭಾರತದ ಅಧೋಗತಿಯನ್ನೂ ನ್ಯಾಯದ ಅಭಾವವನ್ನೂ ತಿಳಿಸ



ಲಾರಂಭಿಸಿದ. ವಾದ ಪರಿಣಾಮಕಾರಿಯಾಯ್ತು. ನಾಯಕ ಆಗಸಕ್ಕೆ ಬೆರಳೆತ್ತಿ ಪ್ರೇಕ್ಷಕರನ್ನು ದೂರಲಾರಂಭಿಸಿದ. ನ್ಯಾಯಾಧೀಶರ ಕಣ್ಣಲ್ಲಿ ನೀರು. ಲಾಯರು ಸುಸ್ತು. ನಾಯಕನ ಮೈ ಬೆವರಿನಲ್ಲಿ ಮುಳುಗಿತು. ನನ್ನ ಕಣ್ಣಿನಲ್ಲೂ ಆನಂದ ಭಾಷ್ಪಗಳು.

ನಾಯಕ ನಿರಪರಾಧಿಯೆಂದು ಸಾರಲಾಯ್ತು. ಬಂದ. ಖಳನಾಯಕನೊಡನೆ ಹೋರಾಡಿದ. ಖಳನಾಯಕ ಓಡಲಾರಂಭಿಸಿದ. ನಾಯಕ ಬೆನ್ನು ಹತ್ತಿದ.

"ನಾನೆದ್ದು ಜೋಯ್ಸರ ಮನೆಗೆ ಹೋದೆ. ನಡುರಾತ್ರಿ ಕಳೆದಿತ್ತು. ಬಾಗಿಲು ತಟ್ಟಿ ಎಬ್ಬಿಸಿದೆ. "ಏನಯ್ಯಾ ನಿನ್ನ ಕಾಟ" ಎಂದರು. ನಾನು ರೇಗಿದೆ. "ಅಲ್ರೀ, ಎಲ್ಲಿ ಕಲ್ತಿರಿ ಈ ಮೋಸ. ಆ ಮಹಡಿ ಮನೆ ಎರಡು ಜಡೆ ಹುಡುಗಿ ಕ್ರಿಶ್ಚಿಯನ್

ಕಣ್ರೀ, ಅವಳಿಗೆ ನೀವು ಹೇಗೆ ಜಾತ್ಕಾ ಬರಿದ್ರೀ? ಶುದ್ಧ ಠಕ್ಕರು ನೀವು" ಎಂದೆ. ಜೋಯ್ಸರು "ಅಲ್ಲಾ ಅಂದವರು ಯಾರು. ಶ್ರೀ ಯೇಸುದಾಸರ ಧರ್ಮಪತ್ನಿ ಮೇರಿಯಮ್ಮನವರ ಗರ್ಭ ಸುಧಾಂಬುಧಿಯಲ್ಲಿ ಪುತ್ರೀ ರತ್ನ ಜನನ. ಜನ್ಮನಾಮ ಯೂಲಾಲಿ ವ್ಯವಹಾರ ನಾಮ ಡೈಸಿ ಎಂದೇ ಕುಂಡಲಿ ಇದೆ. ಕ್ರಿಶ್ಚಿಯನ್ನರಾದರೇ ನಂತೆ. ಅವರಿಗೂ ನವಗ್ರಹಗಳಿವೆ. ಅವರಿಗೇನು ಬೇರೆ ಸ್ಪೆಷಲ್ ಗ್ರಹಗಳೋ?" ಎಂದು ಸಮಾಧಾನ ಹೇಳಿದರು. ಮಹಡೀ ಮನೆಗೆ ಹೋದೆ. ಎಲ್ಲರೂ ನಿದ್ರಿಸಿದ್ದರು. ಥೇಟರಿಗೆ ಬಂದೆ ನಾಯಕ ಖಳನಾಯಕನನ್ನು ಇನ್ನೂ ಬೆಂಬತ್ತಿಯೇ ಇದ್ದ. ನನ್ನ ಸಿಗರೇಟು ಪ್ಯಾಕ್ ಖಾಲಿಯಾಗಿದ್ದುದರಿಂದ ಹೋಗಿ ಇನ್ನೊಂದು ಪ್ಯಾಕ್ ಕೊಂಡೆ. ಆಕಾಶ ಮೊದಲೇ ಮೇಘಾವೃತವಾಗಿತ್ತು. ಈಗ ಗಾಳಿ ಬೀಸಿತು. ಮಿಂಚೆರಗಿದವು. ಮಳೆ ಧೋ ಧೋ ಎಂದು, ಜಡ್ಜಿಯ ಕಣ್ಣೀರಿನಂತೆ ಸುರಿಯ ಲಾರಂಭಿಸಿತು.

"ಅಷ್ಟು ಹೊತ್ತಿಗೆ ಖಳನಾಯಕ ಕೋಟೆಯನ್ನು ಸೇರಿದ. ಮಾಮೂಲಿ ನೃತ್ಯ ಗೀತಾನಂತರ ನಾಯಕ ಲಗ್ಗೆ ಹತ್ತಿದ. ಖಳನಾಯಕನ ಆವಾಸಕ್ಕೆ ಡೈನ ಮೈಟ್ ಇಟ್ಟು, ದ್ರಾವಿಡರ ಶ್ರೇಷ್ಠತೆಯನ್ನು ಕುರಿತು ಮತ್ತೊಂದು ಗೀತೆಯನ್ನು ಮುಗಿಸಿ ಡೈನಮೈಟಿಗೆ ಬೆಂಕಿ ಇಟ್ಟ. ಧಡಾರನೆ ಸದ್ದಾಯ್ತು. ಆಗಸ ತಳಮಳಿಸಿತು. ಖಳನಾಯಕನ ಮನೆ ಸಿಡಿದು ಚೂರಾಯ್ತು. ಅದೇ ಕ್ಷಣದಲ್ಲೇ ಮಳೆಯ ಜೋರಿ ನಿಂದ ಥೇಟರಿನ ಒಂದು ಭಾಗ ಕುಸಿದುಬಿತ್ತು. ನಾನು ರಸ್ತೆಗೆ ಚಿಮ್ಮಿ ಬಂದುಬಿದ್ದೆ ಬೆಳಗಿನ ಕೋಳಿ ಕೂಗಿತು. ಸೆಕೆಂಡ್ ಷೋಗೆ ಕ್ಯೂ ನಿಂತಿತ್ತು.

ನಾನು ಮಹಡಿ ಮನೆಗೆ ಹೋದೆ. ಯೇಸುದಾಸರು ಮಾಡುತ್ತಿದ್ದ ನಿದ್ದೆಗೆ ಇತಿ ಶ್ರೀ ಮಾಡಿದೆ. ಅವರ ಮಗಳು, ಯುಲಾಲಿ ವ್ಯವಹಾರ ನಾಮ ಡೈಸಿ, ನನ್ನ ಹೃದಯವನ್ನು ಕದ್ದ ಸುದ್ದಿ ತಿಳಿಸಿ ಮದುವೆಗೆ ಒಪ್ಪಿಗೆ ಕೇಳಿದೆ.

ಅವರು "ನೀನು ವಿಗ್ರಹಾರಾಧಕ. ಆದುದರಿಂದ ರಹದಾರಿ ಬಂದ ಅದೆ" ಎಂದರು.

"ಆದರೆ ಪ್ರೇಮವನ್ನು ನೀವು ತಡೆಯಲಾರಿರಿ. ಪ್ರೇಮ ಎಲ್ಲವನ್ನೂ ಜಯಿಸ ಬಲ್ಲದು" ಎಂದಾರಂಭಿಸಿದೆ, ನಾನು.

"ಆದರೆ ಪ್ರೇಮ ಯೇಸುದಾಸನನ್ನು ಜಯಿಸಲಾರದು" ಎಂದರು ಅವರು ಕತ್ತುಹಿಡಿದು ನೂಕಿದರು. ನಾನೀಗ ಹೃದಯವಿಲ್ಲದವನಾಗಿದ್ದೇನೆ."

ಅಧ್ಯಕ್ಷರ ಕತೆ ಎಲ್ಲರಿಗೂ ಉತ್ಸಾಹ ನೀಡಿತು. ಚಪ್ಪಾಳೆ ಮೂರು ಲೋಕ ಗಳಲ್ಲೂ ಕೇಳಿಸಿತು. ಅನುಭವ ಕಥನ ಮುಗಿಯಿತು. ರವೆ ಉಂಡೆ ತಟ್ಟೆಗಳು ಬಂದವು. ಸಾಮೂಹಿಕ ಪ್ರೇಮ ಶ್ರಾದ್ಧ ಆರಂಭವಾಯ್ತು.

—ಅ. ರಾ. ಸೇ.

ಕಾವಕ್ಕ

ಮೂರು ವರ್ಷ ವಿಲಾಯ್ತಿಯಲ್ಲಿ ಆಹಾರ ಶಾಸ್ತ್ರದ ಅಭ್ಯಾಸವನ್ನು ಮಾಡಿ ಪಂಡಿತನೆಂದು ಬಿರುದು ಪಡೆದು ನಮ್ಮ ದೇಶಕ್ಕೆ ಬಂದು ಸರ್ಕಾರದ ಆಹಾರದ ನಿಪುಣನಾಗಿ ಕೆಲಸವನ್ನು ಶುರುಮಾಡಿದ ಮೂರು ತಿಂಗಳು ತುಂಬಾ ಕೆಲಸವಿದ್ದುದ್ದರಿಂದ, ಅಜ್ಜಿಯಿದ್ದ ಹಳ್ಳಿಗೆ ಕಾವಕ್ಕನನ್ನು ನೋಡಲು ಹೋಗಲು ಆಗಲೇ ಇಲ್ಲ. ಆ ಮೂರು ತಿಂಗಳಲ್ಲಿ ಉತ್ಸಾಹದಿಂದ ಕೆಲಸಮಾಡಿದೆನಾದರೂ, ಕಲಿತ ವಿದ್ಯೆಯನ್ನು ಪ್ರಯೋಗಮಾಡಲು ನಮ್ಮದೇಶದಲ್ಲಿ ಅಸಾಧ್ಯ ಎಂದೇ ಎನಿಸಿತ್ತು. ಕಿಸೆ ತುಂಬಿದ್ದರೂ ಮನಸ್ಸು ಬೇಜಾರಿನಿಂದ ತುಂಬಿತ್ತು.

* * *

ಹಳ್ಳಿಗೆ ಹೋದಾಗ ಮಧ್ಯಾಹ್ನ ಮೂರುಗಂಟೆ ಸಮಯ. ಹಜಾರದಲ್ಲಿ ೮೦ ವರ್ಷದ ಅಜ್ಜಿ, ಕಾವಕ್ಕ ಸಂಡಿಗೆ ಇಡುತ್ತಿದ್ದಳು. ಹಳೇಕಾಲದ ಮನೆ, ಹಜಾರ ಕತ್ತಲು ಕತ್ತಲು. ಪ್ರಾಯದವನಾದ ನನಗೇ ಕಣ್ಣು ಕಾಣದಂತಾಗಿತ್ತು. ಆದರೆ ಕಾವಕ್ಕ "ಬಂದ್ಯಾ! ಮಗು! ಚೆನ್ನಾಗಿದ್ದೀಯಾ" ಎಂದು ಕೂಗಿದಳು, ಕೂತಲ್ಲಿಂದಲೇ. ಹತ್ತಿರ ಹೋಗಿ ಕೂತುಕೊಂಡೆ. "ಚೆನ್ನಾಗಿದ್ದೀಯಾ, ಕಾವಕ್ಕ! ವಿಲಾಯ್ತಿಗೆ ಹೋಗುವ ಮೊದಲು ನಿನಗೆ ಮಾತು ಕೊಟ್ಟಿದ್ದು ಜ್ಞಾಪಕವಿದೆಯೇ? ಅಲ್ಲಿ ಮಾಂಸ ಮದ್ಯ ಮುಟ್ಟೊಲ್ಲ ಅಂತ, ಆ ಮಾತನ್ನು ನಡೆಸಿಕೊಂಡು ಬಂದಿದೇನೆ. ಚೆನ್ನಾಗಿ ಓದಿ ಬಂದಿದೇನೆ. ನಿನ್ನ ಆಶೀರ್ವಾದದಿಂದ ಒಳ್ಳೇ ಪಗಾರದ ಕೆಲಸ ಸಿಕ್ಕಿದೆ. ಆಗಲೇ ಬರುಕ್ಕೆ ಆಗಲಿಲ್ಲ, ಮೂರು ತಿಂಗಳು ಆದಮೇಲೆ ಈಗ ಬಂದೆ ಅಂತ ಕೋಪಮಾಡಿಕೋಬೇಡ" ಎಂದು ಹೇಳಿದೆ.

"ನಿನ್ನ ಕಂಡರೆ ಹ್ಯಾಗಾರೂ ಕೋಪ ಬರುತ್ತೋ! ಮಗೂ! ನೀನು ಮಾತು ನಡೆಸುತ್ತೀ ಅಂತ ನನಗೆ ಚೆನ್ನಾಗೂ ತಿಳಿದಿತ್ತು. ನಿಮ್ಮಮ್ಮನ ಹಾಗೇನೇ ನೀನೂ ಹರವಾದಿ ಅಕಸ್ಮಾತ್ ಕಣ್ಣುಮುಚ್ಚಿಕೊಂಡಳು. ನಿನಗೆ ಅವಳು ಮಾಡಬೇಕಾದ ಉಪಚಾರವನ್ನು ನಾನಾದರೂ ಮಾಡೋಣ ಅಂತ ಮಗಳು ಸತ್ತ ಅಳಿಯನ ಮನೆಗೆ ಬಂದು ನಿಂತೆ; ನಿನ್ನ ಓದು ಮುಗಿಯುವತನಕ. ನೀನು ಜಾಣ, ಅಲ್ಲಿ ಮಾಂಸ ಮದ್ಯ ಮುಟ್ಟಲಿಲ್ಲ ಎಂದೆ. ಇಲ್ಲಿ ಏನು ಮಾಡಬೇಕೆಂದು ಆಶೆಯಿದೆಯೋ ಅದೆಲ್ಲಾ ಮಾಡಿಕೋ ಆದರೆ ರಸ್ತೆಯವರ ಕಣ್ಣಿಗೆ ಬೀಳದಂತೆ ಮನೆಯಲ್ಲೇ ಮಾಡಿಕೋ" ಎಂದು ಸಹಜವಾಗಿ ಉಪದೇಶಮಾಡಿದಳು.

ಆ ವೇಳೆಗೆ ಮನೆಯ ಮಗಳ ಮಕ್ಕಳುಗಳು ಶಾಲೆಯಿಂದ ಬಂದರು. ನಾನು ನಾಲ್ಕುವರ್ಷದ ಹಿಂದೆ ಅವರನ್ನು ನೋಡಿದಾಗ ಕುಚೇಲನಂತಿದ್ದವರು, ಈಗ ಸೈಂಧವ ರಂತೆ ಬೆಳೆದುಬಿಟ್ಟಿದ್ದರು. ಅವರು ಕಾವಕ್ಕನ ಸುತ್ತಲೂ ಕುಳಿತುಕೊಂಡು, ನನ್ನನ್ನು ಪ್ರಶ್ನಿಸುವುದಕ್ಕೆ ಶುರುಮಾಡಿದರು. "ಏನೇನು ಓದಿದೆ, ಯಾವ ಯಾವ ಊರು ನೋಡಿದೆ" ಎಂದು ಕೇಳುತ್ತಾ, ನಂತರ ವಯಸ್ಸಿಗೆ ತಕ್ಕಂತೆ ಸುದ್ದಿ ಕೇಳಿದರು. "ಅಲ್ಲಿ ಏನು ತಿಂಡಿ ತಿನ್ನುತ್ತಿದ್ದೆ, ಯಾವ ಸಿನಿಮಾ ಚೆನ್ನಾಗಿತ್ತು, ಅಲ್ಲಿನ ಹೆಂಗಸರು ಹೇಗಿರುತ್ತಾರೆ, ಅಲ್ಲಿನ ಭಾಷಣಕಾರರು ಸಂಗೀತಗಾರರು ಹೇಗೆ ಜೀವನ ನಡೆಸುತ್ತಾರೆ, ಅಲ್ಲಿನ ಆಧ್ಯಾತ್ಮಿಕ ಹಿತ ಅರಸುವವರು ಯಾವ ರೀತಿ ಸಂಯಮ ಶಿಸ್ತು ನಡೆಸುತ್ತಾರೆ" ಇತ್ಯಾದಿ, ಇತ್ಯಾದಿ.

ನಾನು ಆಹಾರ ಶಾಸ್ತ್ರ ಓದಿಬಂದವನು. ಶುರುಮಾಡಿದೆ ನಾನು ಕಲಿತಿದ್ದನ್ನು. ಅಲ್ಲಿ ಯಾವ ರೀತಿ ಶಕ್ತಿವರ್ಧಕ ಆಹಾರವನ್ನು ಶಾಸ್ತ್ರೀಯವಾಗಿ ತಿನ್ನುತ್ತಾರೆ, ಆವಶ್ಯಕ ಆಹಾರವನ್ನು ಹೇಗೆ ಭದ್ರಮಾಡುತ್ತಾರೆ. ವ್ಯಾಯಾಮ ಹೇಗೆ ಜೀವನ ಯಾವರೀತಿ ಇತ್ಯಾದಿ.

ಇದೊಂದೂ ಕಾವಕ್ಕನಿಗೆ ಕೇಳಿಸಲೇ ಇಲ್ಲ ಎಂದುಕೊಂಡಿದ್ದೆ. ಅರಳ್ಳಿಟ್ಟು, ಬೆಲ್ಲ, ಹಸುವಿನ ಬೆಣ್ಣೆ ಕಲಸಿ, ತುತ್ತು ತುತ್ತುಮಾಡಿ ನಮಗೆಲ್ಲಾ ಹಂಚುವ ಕೆಲಸ ದಲ್ಲೇ ಮಗ್ನಳಾಗಿದ್ದಳು. ಐದು ನಿಮಿಷ ಅಡಿಗೆಮನೆಗೆ ಹೋಗಿ ಒಂದು ದೊಡ್ಡ ತಟ್ಟೆಯಲ್ಲಿ ಕರಿದ ಸಂಡಿಗೆ ತಂದು, "ಚೆನ್ನಾಗಿದೆ ಮಗೂ ತಿನ್ನು ವೈಗೆ ತಂಪು" ಎಂದು ನನ್ನ ಎದುರಿಗಿಟ್ಟಳು.

ಅರಳ್ಳಿಟ್ಟು ಸಂಡಿಗೆ ತಿನ್ನುತ್ತಾ ಇದ್ದಾಗ, ಅದರ ಸವಿಯನ್ನು ಕಾಣದ ಬಾಯಿ, ನೀರಾಡುತ್ತಿದ್ದಾಗ ನನ್ನ ಮಾತು ನಿಂತಿದ್ದು ಸಹಜವೇ!

ಆಗ ಕಾವಕ್ಕ ಕೇಳಿದಳು. "ಮಗೂ! ಅಂದಹಾಗೇ ಅಲ್ಲಿನ ಜನ ಕಾಯಿಲೆ ಬೀಳುವುದಿಲ್ಲವೇ" ಅಂತ.

"ಅಯ್ಯೋ! ಕಾಯಿಲೆ ಬೀಳದೆ ಉಂಟೆ! ನಮ್ಮಲ್ಲಿ ನೂರು ರೋಗಿಗಳು ಆಸ್ಪತ್ರೆ ಇದ್ದರೆ, ಅಲ್ಲಿ ಹತ್ತುನೂರು ರೋಗಿಗಳ ಹತ್ತು ಆಸ್ಪತ್ರೆ ಇದೆ. ಎಷ್ಟು ಚೆನ್ನಾಗಿ ಆರೈಕೆ ಮಾಡುತ್ತಾರೆ ಅಂತೀ" ಎಂದೆ; ಸಂಡಿಗೆ ಚೂರನ್ನು ಮೆಲಕುತ್ತಾ, ಹಾಗೂ ಜಂಭದ ದನಿಯಲ್ಲಿ.

ಆಗ ನಮ್ಮ ಚಿಕ್ಕಪ್ಪ ಮನೆಗೆ ಬಂದರು. "ಯಾವಾಗ ಬಂದೆ ಮಗು ರಸ್ತೆಯಲ್ಲಿ ಕಾರು ಕಂಡಾಗಲೇ ನೀನು ಬಂದಿರಬಹುದು ಎಂದು ಊಹಿಸಿಕೊಂಡೆ. ಚೆನ್ನಾಗಿ ದ್ದೀಯಾ!

ಕಾವಕ್ಕ! ವಿಲಾಯ್ತಿಗೆ ಹೋಗಿ ಷಹರಿನಲ್ಲಿ ದೊಡ್ಡ ಕೆಲಸದಲ್ಲಿರುವವನು ಬಂದಾಗ ಒಂದಿಷ್ಟು ರವೆ ಉಪ್ಪಿಟ್ಟು, ಬೋಂಡಾ ಮಾಡಿಕೊಡದೆ, ಹಳೇಕಾಲದ ಅರಳ್ಹಿಟ್ಟು ಸಂಡಿಗೆ ಕೊಡ್ತಿದೀಯಲ್ಲಾ! ಅವನೇನು ತಿಳಿದುಕೊಂಡಾನು?" ಎಂದರು.

ನಮ್ಮ ಚಿಕ್ಕಪ್ಪ, ಕಾವಕ್ಕನ ನಾಲ್ಕನೆಯ ಅಳಿಯ. ಶಾಲಾಮಾಸ್ತರು. ಕಾವಕ್ಕನ ಎಲ್ಲಾ ಅಳಿಯಂದಿರೂ ಸದರದಿಂದ ಅತ್ತೆಯನ್ನು ಕಾವಕ್ಕ ಎಂದೇ ಕರೆಯುತ್ತಿದ್ದರು. ಚಿಕ್ಕಪ್ಪ ಕೂಡ ಅಪ್ಪನ ತರಹಾನೇ, ಮೂರು ಮಕ್ಕಳನ್ನು ಹಡೆದ ಚಿಕ್ಕ ಹೆಂಡತಿಯನ್ನು ಕಾಲರಾದಲ್ಲಿ ಕಳೆದುಕೊಂಡಿದ್ದರು. ಆ ಮಕ್ಕಳ ಪೋಷಣೆಗಾಗಿ ಬ್ರಹ್ಮಚರ್ಯ ವ್ರತ ಹಿಡಿದು ಜೀವನಯಾತ್ರೆ ಸಾಗಿಸುತ್ತಿದ್ದರು. ಅಂತಹ ಮೊಮ್ಮಕ್ಕಳಿಗೆಲ್ಲಾ ಕಾವಕ್ಕನೇ ಧ್ರುವತಾರೆ!!

"ಏನು ಚಿಕ್ಕಪ್ಪಾ! ಹೊರಗೆ ಹೋಗಿ ಬಂದಾಕ್ಷಣ ವೇಷ ಬದಲಾಯಿಸಬಹುದು. ಆದರೆ ಕಲಿತ ರುಚಿ ಹೋಗುತ್ಯೇ? ಈ ತಿಂಡಿಯನ್ನು ತಿಂದ ಸವಿಗೋಸ್ಕರವೇ ಅಷ್ಟೂದಿನಗಳಿಂದ ಕಾಯುತ್ತಿದ್ದೆ!" ಎಂದೆ ನಾನು.

"ನೀನು ಆಹಾರ ನಿಪುಣ ಕಣೋ ಮಗು, ಇದರ ವಿಚಾರ ಮಾತನಾಡುಕ್ಕೇ ಹೆದರಿಕೆಯಾಗುತ್ತೆ" ಎಂದರು ಚಿಕ್ಕಪ್ಪ; ಪಕ್ಕದಲ್ಲೇ ಕೂತು, ಸಂಡಿಗೆ ತಟ್ಟೆಗೆ ಸಂಕೋಚವಿಲ್ಲದೇ ಕೈಹಾಕುತ್ತಾ.

ಕಾವಕ್ಕ ಆಗ ಅಂದಳು. "ಮಗು ಈಗತಾನೆ ಹೇಳಿದ ಆ ಊರುಗಳಲ್ಲಿ ನಮಗಿಂತ ಹತ್ತ್ರಕ್ಕೆ ಹತ್ತರಷ್ಟು ಆಸ್ಪತ್ರೆಗಳಿವೆಯಂತೆ. ಮಕ್ಕಳಿಗೆ ಒಳ್ಳೇ ಆಹಾರ ಯಾವುದು ಅಂತ ಅವರಿಗೆ ಗೊತ್ತಿದ್ದರೆ, ಅಷ್ಟುಜನ ಬೆಳೆದಮೇಲೆ ಖಾಯಿಲೆ ಯಾಕೆ ಬೀಳುತ್ತಿದ್ದರು? ಅಲ್ಲಿನ ಆಚಾರ್ರು ಪುಸ್ತಕದ ಬದನೆಕಾಯಿಗಳು—ಅಂತಹ ಬದನೆಕಾಯಿ ಬೇಡ ಅಂತ ಅವರೇ ಹೇಳಿದರೂ, ಆಚರಣೇಲಿ ಅದೇನೇ!!"

"ಏನು ಕಾವಕ್ಕ! ಹಳ್ಳಿಯೋರು ನಾವು ಮೂಢರು ಅಂತ ತೋರಿಸಿಕೊಡ್ತಿದೀಯಲ್ಲಾ! ಇವನು ಆಹಾರ ಶಾಸ್ತ್ರದಲ್ಲಿ ಡಾಕ್ಟರಮ್ಮಾ! ನಮ್ಮ ದೇಶದಲ್ಲಿ ಇವನಂತಹವರು ಇಬ್ಬರೋ ಮೂವರೋ ಅಷ್ಟೇ! ಅವನೆದುರಿಗೆ...."

ನಾನು ಆಗಂದೆ—"ಚಿಕ್ಕಪ್ಪ ಹಾಗನ್ನಬೇಡಿ. ಕಾವಕ್ಕ ಹೇಳುವುದರಲ್ಲಿ...."

ಅಥ ಕಾವಕ್ಕ ಇನ್ನೊಂದು ದೊಡ್ಡ ತಟ್ಟೆ ಕರಿದ ಸಂಡಿಗೆಯನ್ನು ತಂದಿಟ್ಟು, ನನ್ನ ಮಾತಿಗೆ ತುಂಡುಹಾಕಿ "ಮಗೂ! ನಾನು ಹೀಗೆ ಹೇಳಿದೆ ಅಂತ ಬೇಜಾರು ಪಡಬೇಡ! ಈಗ ನೋಡು!! ನಮ್ಮ ಹಿರಿಯರು ಹೇಳಿದ, ನಮ್ಮೂರಿನಲ್ಲಿ ಆಯಾ ಕಾಲದಲ್ಲಿ ಸುಲಭವಾಗಿ ಸಿಗುವ ಆಹಾರದ ಪದಾರ್ಥಗಳಿಂದ ಅಡಿಗೆಮಾಡಿ, ತಿಂಡಿ ಮಾಡಿ ಮಕ್ಕಳನ್ನು ಬೆಳೆಸುತ್ತಿದ್ದೇವೆ. ಇದೇ ರೀತಿ ನಿನ್ನನ್ನೂ ಬೆಳೆಸಿದೆ, ಈ ಮಕ್ಕಳೂ

ಬೆಳೆದರು. ನಿನ್ನನ್ನು ನೋಡಿದರೆ, ಈ ಬೆಳೆದ ಮಕ್ಕಳನ್ನು ನೋಡಿದರೆ, ಮುದುಕಿಯ ಕಣ್ಣು ಕೂಡ ಸಂತಸದಿಂದ ಚೆನ್ನಾಗಿ ಕಾಣಿಸುತ್ತೆ. ನಾನೂ ಹೀಗೆಯೇ ಬೆಳೆದವಳು, ಈಗಲೂ ಕೂಡ ಕೋಡುಬಳೆಯನ್ನು ನನ್ನ ಹಲ್ಲಿನಿಂದಲೇ ಅಗಿದು ತಿನ್ನಬಲ್ಲೆ" ಎಂದಳು.

ಆ ವೇಳೆಗೆ ಇದ್ದ ಸಂಡಿಗೆಯನ್ನೆಲ್ಲಾ ನಾನೇ ಮುಗಿಸಿದ್ದೆ. ನಾನು ಕಲಿತ ಶಾಸ್ತ್ರ ಹೇಳಿತ್ತು; ಸ್ವಲ್ಪ ಅಡ್ಡಾಡಿ ಬಂದರೆ ವ್ಯೆಗೆ ಒಳ್ಳೆಯದು ಅಂತ.

ಆಗ ಮರಿ ಹೇಳಿದ—(ಮರಿ ನಮ್ಮ ಚಿಕ್ಕಮ್ಮನ ಆರುವರ್ಷದ ಕಿರಿಯ ತಬ್ಬಲಿ ಮಗ) "೪೩೬ ಸ್ಟಾಂಪುಗಳನ್ನು ಕೂಡಿಟ್ಟಿದ್ದೇನೆ, ನೋಡುಬಾ" ಅಂತ.

ಅವನೊಡನೆ ಆರಡಿ ದೂರದಲ್ಲಿದ್ದ ಪಡಸಾಲೆಗೆ ಹೋಗಿ ಅವನು ತೋರಿಸಿದ್ದನ್ನೆಲ್ಲಾ ೩ ತಾಸು ನೋಡಿದೆ. ಅವನ ಆನಂದ, ಕೆಚ್ಚು, ಸಡಗರ, ಟೀಕೆ ನೋಡಿದಾಗ ಕಾವಕ್ಕ ಬದುಕಿರುವತನಕ ಅವನನ್ನು "ತಬ್ಬಲಿ" ಎಂದು ಅನ್ನುವುದು ತಪ್ಪು ಎಂದು ಅನ್ನಿಸಿತು. ಮರಿ ಭಾಳ ಶಹಣೆ!

* * *

ಇದೆಲ್ಲಾ ಮುಗಿಯುವ ವೇಳೆಗೆ ಕೂತಲ್ಲೇ ರಾತ್ರಿ ಎಂಟಾಗಿತ್ತು. ಊಟಕ್ಕೇಳಿ ಎಂದು ಕಾವಕ್ಕನ ಕರೆ. ಸಂಜೆ ನಾಲ್ಕು—ನಾಲ್ಕೂವರೆ ತನಕ ಅಷ್ಟು ತಿಂದಿದ್ದರೂ, ವ್ಯಾಯಾಮ ಮಾಡದೇ ಅಡಿಗೆ ಮನೆಯಿಂದ ತೇಲಿಬಂದ ಸಾರಿನ ಘಮಘಮದಿಂದಲೋ ಅಕ್ಕರೆಯ ಮಾತು ನಡತೆಯಿಂದಲೋ, ನೆನಪಿನ ವಿಶ್ವಾಸದ ಮಾಟದಿಂದಲೋ, ಏನೋ ಕಾಣೆ, ಬಲು ಹಸಿವಾಗಿತ್ತು. ಅಂದು ರಾತ್ರಿ ಆ ಹಳ್ಳಿಯಲ್ಲಿ ಕಾವಕ್ಕ ಬಡಿಸಿದಾಗ ನಾನು ಉಂಡಾಗ ಆದ ಸುಖ ಇಂದೂ ದೊರಕಿಲ್ಲ—ಹದಿನೆಂಟು ವರ್ಷದಾನಂತರ.

ಮಲಗಿದಾಗ ನನಗನ್ನಿಸಿತು; ಆಹಾರ ವಿಜ್ಞಾನಕ್ಕೆ ವಿಲಾಯಿತಿಗೆ ಏಕೆ ಹೋದೆ? ಅಜ್ಜಿ ಕಾವಕ್ಕನ ಹತ್ತಿರ ಕಲಿತಿದ್ದರೆ ದೇಶಕ್ಕೆ ಎಷ್ಟೋ ಹಿತವಾದ ಸೇವೆ ಮಾಡಬಹುದಾಗಿತ್ತಲ್ಲಾ ? ಎಂದು.

ಯೋಚನೆ ಮುಂದುವರಿಯುವ ಮೊದಲೇ ನಿದ್ರೆ ಜಡಿದು ಬಂದಿತ್ತು.

—ಡಾ॥ ಪ್ರಸಾದ್.

ಮೈಸೂರು ಸಂಸ್ಥಾನದ ಮುಖ್ಯ ಕೇಂದ್ರಗಳಲ್ಲಿ

ಈ ತಿಂಗಳ ಬಿಡುಗಡೆ!



ಗೀತಾ ಫಿಲಂಸ್‌ರವರ—

★ ಅತ್ತಿಗೆ ★

—[ಕನ್ನಡ]—

ಜಿ. ವರಲಕ್ಷ್ಮಿ — ರಾಮಗೋಪಾಲ್

★

ಹಂಚಿಕೆ:

ವಿಕ್ರಮ್ ಪಿಕ್ಚರ್ಸ್

ಗಾಂಧಿನಗರ - - ಬೆಂಗಳೂರು-೯.

Printed by B. S. Iyengar, Bangalore City.

Publisher—B. N. Gupta. Editor—M Sivaram